ಕಣವಿ ಚುಟುಕುಗಳು

ನಾಡೋಜ ಡಾ. ಚನ್ನವೀರ ಕಣವಿ ಅವರ ಆಯ್ದ ಚುಟುಕುಗಳು



ವೈದ್ಯವಾರ್ತಾ ಪ್ರಕಾಶನ

ವೈದ್ಯವಾರ್ತಾ ಪ್ರಕಾಶನ
ವಿದ್ಯಾರಣ್ಯಪುರಂ
ಮೈಸೂರು - 570 008 ☎ : 2485959

... ಶುಭಾಶಯಗಳು

೧೬-೨-೨೦೧೦

ಕಣವಿ ಚುಟುಕುಗಳು

(ನಾಡೋಜ ಡಾ.ಚೆನ್ನವೀರ ಕಣವಿ

ಅವರ ಆಯ್ದ ಚುಟುಕುಗಳು)

ಡಾ. ಎಂ.ಜಿ. ಆರ್ ಅರಸ್

ಸಂಪಾದಕರು

ವೈದ್ಯವಾರ್ತಾ ಪ್ರಕಾಶನ

ವಿದ್ಯಾರಣ್ಯಪುರಂ

ಮೈಸೂರು - 570 008 ☎ 2485959

KANAVI CHUTUKUGALU : Collection of chutukus written by NADOJA DR. Chennaveera Kanavi Edited and Published by Dr.M.G.R. Urs, for Vaidyavartha Prakashana, Vidyaranyapuram - Mysore - 570 008 Ph : 0821-2485959.

ಪ್ರಥಮ ಮುದ್ರಣ : ೨೦೦೯

ಪ್ರತಿಗಳು : ೧೦೦೦

ಪುಟಗಳು : ೮೦

ಬೆಲೆ ರೂ : ೪೦ /-

ಅಕ್ಷರ ವಿನ್ಯಾಸ : ಅರಸ್ ಡಿ.ಟಿ.ಪಿ. ☎ : ೨೪೮೫೯೫೯

ಮುದ್ರಕರು : ಶ್ರೀ ನಂದಿಕೇಶ್ವರ ಆಫ್‌ಸೆಟ್ ಪ್ರಿಂಟರ್ಸ್ , ಮೈಸೂರು
☎ : ೦೮೨೧ - ೨೪೪೫೯೩೦

ಮುನ್ನುಡಿ

ಎರಡು ದಶಕಗಳ ಹಿಂದೆ ಡಾ:ಎಂ.ಜಿ.ಆರ್. ಅರಸು ಅವರು ಚುಟುಕು ಯಜ್ಞಾಶ್ವವನ್ನಲಂಕರಿಸಿ, ದಿಗ್ವಿಜಯಾರ್ಥವಾಗಿ ಅಟ್ಟಿದ ನಂತರ ಅದು ಕನ್ನಡ ನಾಡಿನಲ್ಲೆಲ್ಲ ಸಂಚರಿಸಿ, ಕನ್ನಡಿಗರ ಮನವನ್ನು ಗೆದ್ದುಕೊಂಡು, ಹೋದೆಡೆಯಲ್ಲೆಲ್ಲ ತನ್ನ ಪ್ರಭಾವಳಿಯನ್ನು ಶಾಶ್ವತ ನೆಲೆಯಲ್ಲಿ ನಿಲ್ಲಿಸಿದ್ದು, ಸಾಹಿತ್ಯೇತಿಹಾಸದ ಗಗನದಲ್ಲಿ ಉಜ್ವಲ ತಾರೆಯಾಗಿ ಮಿನುಗಲಾರಂಭಿಸಿದ್ದು, ಒಂದು ಐತಿಹಾಸಿಕ ಘಟನೆಯೆಂದೇ ಹೇಳಬೇಕು.

ಜನಪದ ಸಾಹಿತಿಯಿಂದ ಹಿಡಿದು ಶಿಷ್ಟಸಾಹಿತಿಯವರೆಗೆ, ಪ್ರತಿಯೊಬ್ಬರೂ ಅರಿತೋ ಮರೆತೋ, ಕನಸಿನಲ್ಲಿಯೋ ಮನಸಿನಲ್ಲಿಯೋ ಈ ತರಹ ಕವಿತೆಗಳನ್ನು ರಚಿಸಿರಬೇಕು. ಒಂದು ಅನುಭವವೊ, ಭಾವನೆಯೊ, ಚಿಂತನೆಯೊ, ದೃಶ್ಯವೊ ಸೃಜನಶೀಲ ವ್ಯಕ್ತಿಯ ಮನಸ್ಸಿನಲ್ಲಿ ಮೂಡಿದಾಗ, ಆಂತರಿಕ ಒತ್ತಡದಿಂದಾಗಿ, ಅದು ಆಕಾರ ಪಡೆಯುತ್ತದೆ. ಚಿಂತನೆಯೊ, ಭಾವನೆಯೊ, ಮಿಂಚಿ ಮರೆಯಾಗದಂತೆ ಅರ್ಥಾತ್ ಗರ್ಭಸ್ರಾವವಾಗದಂತೆ ಚುಟುಕು ಅಥವಾ ಮುಕ್ತಕ ಅವನ್ನುಳಿಸಿ ಸೃಷ್ಟಿಯ ಉದ್ದೇಶವನ್ನು ಈಡೇರಿಸುತ್ತವೆ. ವಾಸ್ತವವಾಗಿ ಸೃಷ್ಟಿಯ ಮೂಲ, ಅಸ್ತಿತ್ವ ಅಥವಾ ಪ್ರಗತಿ, ವಿಚಾರ ಹಾಗೂ ಭಾವನೆಗಳನ್ನವಲಂಬಿಸಿರುವುದುಂಟಷ್ಟೆ.

ವಿಶೇಷವಾಗಿ ಚುಟುಕುಗಳನ್ನೇ ರಚಿಸಿ ಆರಾಧ್ಯ ಸ್ಥಾನದಲ್ಲಿರುವ ಕವಿಗಳುಂಟು. ಶತಮಾನಗಳುರುಳಿದರೂ ಸರ್ವಜ್ಞ ಇಡೀ ಕನ್ನಡಿಗರ ಹೆಮ್ಮೆಯ ಕವಿಯಾಗಿ ರಾರಾಜಿಸುತ್ತಿದ್ದಾನೆ. ಆಧುನಿಕರಲ್ಲಿಯೂ ದಿನಕರ ದೇಸಾಯಿ, ವಿ.ಜಿ.ಭಟ್ಟ, ಡಿ.ವಿ.ಜಿ, ತೀ.ನಂ.ಶ್ರೀ , ಕೆ.ಸಿ.ಶಿವಪ್ಪ , ಕುಮಾರ ನಿಜಗುಣ, ಅಕಬರ ಅಲಿ ಮೊದಲಾದ ಚುಟುಕು ಕವಿಗಳು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನೇ ತೆರೆದು ಚುಟುಕು/ಮುಕ್ತಕಗಳಿಗೆ ಗೌರವಯುತವಾದ ಸ್ಥಾನವನ್ನು ಒದಗಿಸಿದ್ದಾರೆ.

ಮಹಾಕವಿಗಳಿಗೂ ಚುಟುಕಗಳ ಬಗ್ಗೆ ವ್ಯಾಮೋಹವುಂಟು, ಗಾತ್ರದಲ್ಲಿ ಚಿಕ್ಕದಾದರೂ ಮೌಲಿಕತೆ ಹಾಗೂ ಮಹತ್ವದ ದೃಷ್ಟಿಯಿಂದ ಚುಟುಕುಗಳ ಪಾತ್ರವನ್ನು ಕಡೆಗಣಿಸುವಂತಿಲ್ಲ. ನಾಡಿನ ಉದ್ದಗಲಗಳಲ್ಲಿ ನಡೆಯುತ್ತಿರುವ ಸಮಾವೇಶಗಳೂ, ದಿನದಿಂದ ದಿನಕ್ಕೆ ಏರುತ್ತಿರುವ ಚುಟುಕು ಕವಿಗಳ ಸಂಖ್ಯೆಯೂ, ಜನತೆಯಲ್ಲಿ ಸಾಹಿತ್ಯಾಭಿರುಚಿಯನ್ನು ಹುಟ್ಟಿಸುತ್ತಿರುವ ರೀತಿಯೂ ಅವುಗಳ ಜನಪ್ರಿಯತೆಯನ್ನು ಡಂಗುರಿಸುತ್ತವೆ.

ಕನ್ನಡ ಸಾಹಿತ್ಯೋದ್ಯಾನದ ರಂಗುರಂಗಿನ ಸುಗಂಧಯುಕ್ತ ಪುಷ್ಪಗಳಲ್ಲಿ ಚೆನ್ನವೀರಕಣವಿ ಹೆಸರಿನ ಪುಷ್ಪವೂ ಒಂದು. ಆ ಪುಷ್ಪದ ಕಂಪನ್ನರಿಯದ ಕನ್ನಡಿಗನಿಲ್ಲ. ಓದುಕಲಿತ ಪ್ರತಿಯೊಬ್ಬ ಕನ್ನಡಿಗನ ತುದಿನಾಲಿಗೆಯಲ್ಲಿ ಆ ಹೆಸರು ರಂಜಿಸುತ್ತದೆ. ವಿರಾಟ್ ಚೈತನ್ಯದ ಅವಿಭಾಜ್ಯಾಂಶವಾದ ಕಣವಿ ಚೇತನದಿಂದ ಉದ್ಭವಿಸುವ ಕಾವ್ಯ ಕಿರಣಗಳಲ್ಲಿ ಮೀಯುವ ಕನ್ನಡಿಗರ ಹೃದಯ ಆನಂದಮಯವಾಗಿರುತ್ತದೆ.

ಅಹಂಕಾರ ಮಾತ್ಸರ್ಯಾದಿ ದೌರ್ಬಲ್ಯಗಳಿಂದ ದೂರವಾಗಿರುವ, ಶುದ್ಧಮನಸ್ಸಿನ ನಿರ್ಮಲಾಂತಃಕರಣದ ಮಡಿಬಾಳ್ವೆಯಿಂದ ಅವತರಿಸುವ ಕಾವ್ಯ ಜನತೆಯನ್ನು ಆನಂದಗೊಳಿಸುತ್ತದೆ, ಜನಜೀವನವನ್ನು ರೂಪಿಸುತ್ತದೆನ್ನುವುದಕ್ಕೆ ಕಣವಿಕಾವ್ಯವೇ ನಿದರ್ಶನ. ಅವರ ಕಾವ್ಯ ಸದಾ ಚಲನಶೀಲವಾಗಿದೆ. ಉಪನಿಷತ್ ಶರಣಸಂಸ್ಕೃತಿಗಳ ಸಂಗಮದ ಶಿಶುವಾದ ಕಣವಿಯವರು ಪರಂಪರೆಯನ್ನು ಜೀರ್ಣಿಸಿಕೊಂಡು ಸತತವಾಗಿ ಪ್ರಗತಿಯಲ್ಲಿ ಬದುಕುತ್ತಾರೆ. ಹೊಸಜನಾಂಗವನ್ನು ನಿರ್ಮಾಣ ಮಾಡಬಲ್ಲ ಜೈವಿಕ ಶಕ್ತಿ ಅವರ ಕಾವ್ಯದಲ್ಲಿದೆ.

ಸತ್ಯದ ತಂತ್ರ ಮಂತ್ರಗಳ ಬಗ್ಗೆ ಸಹಾನುಭೂತಿಯಿದ್ದರೂ ನವೋದಯದಲ್ಲಿಯೇ ಬೇರುಬಿಟ್ಟು, ಸುಂದರ ಪ್ರಸೂನಗಳನ್ನು ಅರಳಿಸಿದ ನೆಲದ ಸಹಜಸ್ವೋಪಜ್ಞ ಪ್ರತಿಭೆ ಅವರದು. ನವೋದಯದ ಜೀವನಾದರ್ಶ ನವ್ಯದ ವಾಸ್ತವತೆಯೆರಡೂ ಅವರ ಕಾವ್ಯದಲ್ಲಿ ಅಡಕವಾಗಿ ಕನ್ನಡದ ಜಾಯಮಾನಕ್ಕನುಗುಣವಾಗಿ ಸಂಗಮಿಸಿವೆ. ಭಾಷೆಯ ಭಾವ ಸೌಂದರ್ಯವನ್ನೂ ಬೌದ್ಧಿಕ ಸಾಮರ್ಥ್ಯವನ್ನೂ ಬೆಸೆದುಕೊಂಡು ಮೋಹಕ ಶೈಲಿಯನ್ನು ನಿರ್ಮಿಸಿ, ಕನ್ನಡಭಾಷೆಗೆ ಕಸುವನ್ನು ಕೆಚ್ಚನ್ನೂ ಕೂರ್ಪನ್ನೂ ಒದಗಿಸಿದ ಹೆಮ್ಮೆಯ ಕಣವಿಯವರು.

ಬಸವ ಹರಿಹರಾದಿ ಶರಣರ ಸಂತಾನದಂತೆ ವಾರಸುದಾರರಂತೆ ಕನ್ನಡ ಸಾಹಿತ್ಯ-ಸಂಸ್ಕೃತಿಯನ್ನು ಬೆಳೆಸಿದ ಕೀರ್ತಿ ಕಣವಿಯವರಿಗೆ ಸಲ್ಲುತ್ತದೆ. ಆಕಾಶಬುಟ್ಟಿ, ಮಧುಚಂದ್ರ ಕಾವ್ಯಾಕ್ಷಿ, ನೆಲಮುಗಿಲು, ಮಣ್ಣಿನ ಮೆರವಣಿಗೆ, ದೀಪಧಾರಿ, ಮೊದಲಾದ ಹಲವು ಕಾವ್ಯ ಸಂಗ್ರಹಗಳ ಹಾಗೂ ಬರವಣಿಗೆಗಳ ಮೂಲಕ ಕನ್ನಡ ಸಾಹಿತ್ಯಕ್ಷೇತ್ರವನ್ನು ಶ್ರೀಮಂತಗೊಳಿಸಿಯೂ, 'ಶ್ರೀಮಂತಿಕೆ'ಯ ಅಟ್ಟಹಾಸವಿಲ್ಲದ ಸದಾ ಉಲ್ಲಾಸಭರಿತವಾದ ನಗುಮೊಗದ, ಸರ್ವಾದರಣೀಯರಾದ ಸುಮನಸರವರು.

ಕನ್ನಡ ನಾಡಿನ ಇಂಥ ಅಚ್ಚು ಮೆಚ್ಚಿನ ಸಮುನ್ನತ ಕವಿಯಾದ ನಾಡೋಜ ಶ್ರೀ ಚೆನ್ನವೀರಕಣವಿಯವರ ಈ ಚುಟುಕುಗಳು ಆ ಕ್ಷೇತ್ರದ ಘನತೆ ಗೌರವಗಳನ್ನು ಹೆಚ್ಚಿಸುವ

ನಿಟ್ಟಿನಲ್ಲಿವೆ. ಜೀವನವೆಂಬುದು ಒಂದು ಆದ್ಯಂತರಹಿತ ಆಯಾಮವುಳ್ಳದ್ದು; ವಿಶ್ವರೂಪಿ, ಅನಂತಮುಖಿ; ವೈವಿಧ್ಯಮಯಿ; ನಿರ್ದಿಗಂತವಾದದ್ದು. ಅದೊಂದು ಮೇರೆಯಿಲ್ಲದ ಮಹಾಸಾಗರ. ಲಕ್ಷಾಂತರ ವರ್ಷಗಳಿಂದ ಮಾನವ ಸಮುದಾಯ ತಮತಮಗೆ ಶಕ್ಯವಿದ್ದಷ್ಟು ವಿಚಾರಾನುಭವಗಳ ಮುತ್ತು ರತ್ನಗಳನ್ನು ಸೂರೆಗೊಳ್ಳುತ್ತಾರೆ, ಎಷ್ಟು ಸೂರೆಗೊಂಡರೂ ಅವು ಅಕ್ಷಯವಾಗುತ್ತವೆ.

ತಮ್ಮ ಹಲವಾರು ಕವಿತೆಗಳಲ್ಲಿ ವಿಪುಲ ವಿಚಾರಾನುಭವಗಳನ್ನು ಹಿಡಿದಿಟ್ಟಿರುವ ಕವಿ ಚೆನ್ನವೀರಕಣವಿಯವರು ಮುಕ್ತಕಗಳಲ್ಲಿಯೂ ನೂರಾರು ಅನುಭವಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಸಮಾಜದ ಓರೆಕೋರೆಗಳನ್ನು ತಿದ್ದುವಲ್ಲಿ ಅವರು ವಿಡಂಬನೆ ಹಾಗೂ ಹಾಸ್ಯಗಳನ್ನು ಸಮರ್ಥವಾಗಿ ಹಾಗೂ ಅರ್ಥವತ್ತಾಗಿ ಬಳಸಿಕೊಳ್ಳುತ್ತಾರೆ. ಸಮಾಜದ ದೋಷ ದೌರ್ಬಲ್ಯಗಳನ್ನಳಿಸುವಲ್ಲಿ ವಿಡಂಬನೆ ಪರಿಣಾಮಕಾರಿಯಾದ ಶಕ್ತ್ಯಾಯುಧವೆಂಬುದು ಇಲ್ಲಿಯ ಉದ್ಧರಣೆಗಳಿಂದ ವಿದಿತವಾ ಗುತ್ತದೆ.

ಹಲವರು ಮಠಾಧಿಪತಿಗಳು ತಾವು ಜಗದ್ಗುರುಗಳೆಂದು ಸ್ವಯಂ ಘೋಷಣೆಮಾಡಿಕೊಂಡಿರುತ್ತಾರಷ್ಟೆ. ಜಗತ್ತೊಂದೇ ಇರುವಾಗ ನೂರು ಜಗದ್ಗುರುಗಳು ಹೇಗಾದರು?

ನಾಡಿನ ತುಂಬಾ ನೂರು ಜಗದ್ಗುರು
ಇರುವುದು ಜಗವೊಂದೇ;
ಕಾಡಿನ ತುಂಬಾ ಬಣ್ಣದ ಹೂಗಳು;
ವಾಸನೆ ಕೆಲವೊಂದೇ.

ಕಾಡಿನ ಕೆಲವು ಹೂವು ಮಾತ್ರ ಹೇಗೆ ವಾಸನೆಯುಕ್ತವಾಗಿರುತ್ತವೆಯೋ, ಹಾಗೆಯೇ ಕೆಲವು ಗುರುಗಳು ಮಾತ್ರವೇ ಸಮಾಜಕ್ಕೆ ಉಪಯುಕ್ತರಾಗಿರುತ್ತಾರೆ, ಹಲವರು ಬರಿಯ ಹೊಟ್ಟೆಹೊರಕರು.

ಮುನಿಸಿಪಾಲಿಟಿಯವರು ಕೆರೆಗಳನ್ನು ಬತ್ತಿಸಿ, ತಾವೇ ಅಲ್ಲಿ ಬಂಗಲೆಗಳನ್ನು ನಿರ್ಮಿಸಿಕೊಳ್ಳುತ್ತಾರೆ; ಅಥವಾ ತಮ್ಮ ಗೆಳೆಯರಿಗೆ ನಿವೇಶನಗಳನ್ನು ಹಂಚುತ್ತಾರೆಂದು ಕವಿ ವ್ಯಂಗ್ಯವಾಗಿ ಹೇಳುತ್ತಾರೆ.

ಬತ್ತಿಹೋದ ಕೆರೆಯಲ್ಲಿ
ಬಂಗಲೆಗಳು ಎದ್ದು ಬಿಟ್ಟಿವೆ
ಜಲದೇವತೆಗೆ
ಎಷ್ಟೊಂದು ಗೋರಿಗಳು..!

ಆಕ್ರಮಣಕಾರರಿಗೆ 'ಗೋರಿ' ಪದದ ಪೂರ್ಣಾರ್ಥ ತಿಳಿಯುತ್ತದೆಯೇ?, ಯಾರ ಗೋರಿಗಳವು? ಪರಿಸರ ನಾಶವನ್ನು ಪ್ರತಿಮಾರೂಪದಲ್ಲಿ ಹಳಿಯಲಾಗಿದೆ.

'ಹೆರಿಗೆ ಸುಲಭವಾಗಿದ್ದರೂ, ಸಿಝೇರಿಯನ್ ಮಾಡಿಸಿಕೊಳ್ಳಬೇಕು', ಇದು ಎಲ್ಲ ಕನ್ನಡಿಗರಿಗೂ ಅರ್ಥವಾಗುವ ವಿಡಂಬನೆ. ಮಾನ ಮರ್ಯಾದೆಯುಳ್ಳ ವೈದ್ಯರಿಗೆ ಇಲ್ಲಿರುವ ವ್ಯಂಗ್ಯ ಅರ್ಥವಾದೀತು. ಎಲ್ಲಿ ನೋಡಿದರೂ ವಂಚನೆ, ಸುಲಿಗೆ, ಶೋಷಣೆ.

'ನಾಡಿಗೆ ದೊರೆತಿಹ ಸ್ವಾತಂತ್ರ್ಯದ ಸವಿ ಹತ್ತಿದೆ ಕೆಲವರಿಗೆ; ಎಡಗೈ ಬಲಗೈ ಬೆಚ್ಚಗೆ ಇಡದಿರೆ ಕೊಡುವರು ಕಸಬರಿಗೆ'- ಈ ಮಾತು ಲಂಚಕೋರರಿಗೆ, ರಾಜಕೀಯ ಧೂರ್ತರಿಗೆ ಮನವರಿಕೆಯಾಗುತ್ತವೆಯೆ? ಹೆಸರಿನ ಮೇಲೆ ಯಾರನ್ನೂ ನಂಬಲಾಗದೆಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಯೋಗೀಂದ್ರ, ಧರ್ಮರಾಯ, ಕರುಣಾಕರನ್ ಎಂಬ ಹೆಸರಿನವರು ಅಪರಾಧಿಗಳು, ದರೋಡೆಕೋರರು ಹಾಗೂ ಕ್ರೂರಿಗಳೇ ಆಗಿರಬಹುದು. 'ಬಹುಧಾನ್ಯ'(ಸಂವತ್ಸರ)ದಲ್ಲು ಧಾನ್ಯದ ಕೊರತೆ, ಬೆಲೆ ಏರಿಕೆ ಎಂದು ಹೆಸರುಗಳನ್ನು ಕವಿ ರೋಡಾಡುತ್ತಾರೆ. ಹಾಲಪ್ಪನವರ ಮನೆಯಲ್ಲಿ ಒಳಲೆ ಹಾಲಿಗೆ ಗತಿಯಿಲ್ಲದಿರಬಹುದು. 'ಸುಪ್ರಭಾತ' ಎಂಬ ಚುಟುಕದಲ್ಲಿ ಕವಿ ಧ್ವನಿಸುರುಳಿಗಳ ಗದ್ದಲವನ್ನು ಅಣಕಿಸುತ್ತಾರೆ. ಸದಾ ಎಚ್ಚರದಲ್ಲಿದ್ದ ಭಗವಂತ ಧ್ವನಿಸುರುಳಿಗಳ ಹಾವಳಿಗೆ ಬೆಚ್ಚಿ ಮಲಗುವುದೆ ಲೇಸೆಂದು ನಿಶ್ಚಯಿಸಿದನಂತೆ.

ಬಡತನದ ಬಗ್ಗೆ ಕವಿಗೆ ಅಪಾರ ಸಹಾನುಭೂತಿಯಿದೆ, ಅನುಕಂಪವಿದೆ. ಹೊಟ್ಟೆಯ ಹಪ್ಪಳೆ, ಎಲುವಿನಗೂಡು, ಜೀವನಮಂದಿರ, ತೊಳಲಾಡುತಿದೆ, ಇವೇ ಮೊದಲಾದ ಚುಟುಕುಗಳು ಬಡವರ ಸಂಕಷ್ಟಗಳನ್ನು ವಿವರಿಸುತ್ತವೆ.

ಸದಾ ನಿಸರ್ಗದ ನಡುವೆ ಇರುವ, ಅದರಿಂದ ನಿರಂತರ ಚೈತನ್ಯವನ್ನು ಪಡೆಯುವ ಕವಿ ಅದರ ವ್ಯಾಪಾರಗಳಲ್ಲಿ ಲೀನವಾಗಿರುತ್ತಾನೆ; ಅದರ ಸೌಂದರ್ಯದ ಆಸ್ವಾದನೆಯಿಂದ ಅವನ ಶರೀರದ ಕಣಕಣಗಳಲ್ಲಿ ಹೊಸ ಶಕ್ತಿ ಸಂಚಾರವಾಗುತ್ತದೆ.

ತಳಿರನುಟ್ಟಿದೆ ಹೂವ ತೊಟ್ಟಿದೆ
ಮಾವು ಹೊರಟಿದೆ ಎತ್ತರೀ?
ಕಾಮ ಬಿಸಿಲಲಿ ನಡೆದು ಬರುವನು
ಅದಕೆ ಹಿಡಿದಿದೆ ಛತ್ತರಿ.

ತಳಿರನುಟ್ಟು, ಹೂವತೊಟ್ಟ ಮಾವಿನಮರ ಬಿಸಿಲಲ್ಲಿ ನಡೆದು ಬರುವ ಕಾಮನಿಗೆ ಚತ್ರಿ ಹಿಡಿಯುವ ಕಲ್ಪನೆ ನೂತನವೂ ಹೌದು, ಸುಂದರವೂ ಹೌದು. ವಸಂತೋತ್ಸವದಲ್ಲಿ ಈ ವರ್ಣನೆ ವಿನೂತನವಾಗಿದೆ. 'ಕೊಂಬೆಯಲಿ ಕವಿತೆ 'ಯನ್ನು ಕಂಡ ಈ ಕವಿ ಸಹಜಕವಿಯೆಂದು ಯಾರಿಗಾದರೂ ಹರ್ಷವಾಗದಿರದು. ಮಾತ್ರೆ ಗಣಗಳ ಜೊತೆಗೆ ಗುದ್ದಾಡಿ ಪದ್ಯ ಬರೆದು ಮುಗಿಸಿದ ಕವಿ ಕೋಣೆಯ ಹೊರಗೆ ಹಣಕಿದಾಗ

ಗಿಡದ ಕೊಂಬೆಯಲ್ಲಿ ಹೊರಹೊಮ್ಮಿತ್ತು
ಚಿಗುರು – ಹೂಗಳ ಕವಿತೆ ಸಾಲು ಸಾಲು.

ಕವಿಪ್ರತಿಭೆಯ ಮಹಿಮೆಯನ್ನರಿಯಲು, ಅಳೆಯಲು ಈ ಎರಡು ಸಾಲುಗಳೆ ಸಾಕು. ಭುವನ ಶಿವನ ಕವನ; ಲಾಸ್ಯ ತಾಂಡವ ಮಿಲನವೇ ಪ್ರಕೃತಿ; ಆ ಪ್ರಕೃತಿಯ ನಿತ್ಯೋಪಾಸನೆ ತಮ್ಮ ಪಾಲಿಗಿರಲಿ; ಆ ಉಪಾಸನೆಯೇ ಓಂಕಾರನಾದಮಯ ಭಾವತರಂಗಗಳಾಗಿ ತಮ್ಮ ಲೇಖನಿಯ ಮೂಲಕ ಮಿಡಿಯಲೆಂಬುದು ಕವಿಯ ಆಶಯ (ಓಂಕಾರಗುಡಲಿ).

ಬದುಕು ನಿರಾಳವಾಗಿರಬೇಕೆಂಬುದು ಮಾನವ ಸಮುದಾಯದ ಆಶೆ. ' ನೀರಮಡಿ, ಜೇನಸವಿ, ಗೀತಸುಧೆ ' ಯಂಥ 'ಗೃಹಿಣಿ' ಹಾಗೂ ತಂದೆ ತಾಯಿಯರ ಎದೆಯ ಕಸವನ್ನು ಕಿತ್ತು, ಸಕ್ಕರೆಯ ಹಳಕನ್ನು ಬಿತ್ತುವ ನಗೆಬೆಳಕನ್ನು ತುಟಿಯಂಚಿನಲ್ಲಿ ಸೂಸುವ ಮಗು (ಮಗುವಿನ ನಗು) ಈ ಇಬ್ಬರಿಂದ ಬದುಕು ನಿರಾಳವಾಗುತ್ತದೆ, ಸಂಸಾರದಲ್ಲಿ ಸುಖಶಾಂತಿ ನಳನಳಿಸುತ್ತವೆಂಬುದು ವಿಶ್ವಸತ್ಯ.

'Resist not evil' ಎಂಬ ಕ್ರಿಸ್ತನ ತತ್ತ್ವ 'ಗೆದ್ದವರು' ಎಂಬ ಚುಟುಕಿನಲ್ಲಿ ಪ್ರತಿಬಿಂಬಗೊಂಡಿದೆ. 'ಒಂದು ಕೆನ್ನೆಗೆ ಹೊಡೆದವರಿಗೆ ಮತ್ತೊಂದು ಕೆನ್ನೆ ತೋರು'

ಅವನನ್ನು ಚೆನ್ನಾಗಿ
ಬಯ್ಯಬೇಕೆಂದು ಹೋದೆ
ಅವನು 'ಹೊಡಿದು ಬಿಡು ನನ್ನ' ಎಂದ
ಗೆದ್ದವರು ಯಾರು ?

ಈ ಸೂತ್ರವನ್ನು ಮನುಷ್ಯ ಅವಲಂಬಿಸಿದಾಗ, ದೇವರ ಸಾಮ್ರಾಜ್ಯ ಭೂಮಿಯ ಮೇಲೆ ಉದಯವಾಗುತ್ತದೆ.

ವಿಸೀ ಅವರ 'ಅಭೀಃ' ಕವಿತೆಯ ಪ್ರತಿಜ್ಞೆಗಳನ್ನು ನೆನಪಿಗೆ ತರುವ, ಆದರೆ ವಿಭಿನ್ನ ಪ್ರತಿಜ್ಞೆಗಳಿರುವ ಮೂರು ಮೌಲ್ಯಾತ್ಮಕ ಚುಟುಕುಗಳನ್ನಿಲ್ಲಿ ಉದ್ಧರಿಸಲಾಗಿದೆ;

ದೈತ್ಯದರ್ಪದ ದುರುಳ ದಾರುಣದ ಹೋರಟೆಗೆ
ಎಂದೆಂದು ನನ್ನ ತಲೆ ಬಾಗದಿರಲಿ;
ಸಾತ್ತ್ವಿಕರ ತಾತ್ತ್ವಿಕರ ಹಿರಿಜೀವದೌನ್ನತ್ಯ
ವಿಶ್ವಭಾವಾತ್ಮರಿಗೆ ನಮನವಿರಲಿ.(೫೩)

ಅಲ್ಲಸಲ್ಲದ ವಿಷಮ ವಿಪರೀತ ಭಾವನೆಯ
ವಿಷಗಾಳಿ ಎನ್ನ ಬಳಿ ಸುಳಿಯದಿರಲಿ;
ಸೊಲ್ಲುಸೊಲ್ಲಿಗೆ ಪರರನಣಕಿಸುವ ಕೆಣಕಿಸುವ
ಅಶಿವ ನುಡಿ ಎನ್ನ ಕಿವಿ ಸೇರದಿರಲಿ.(೫೧)

ಹಿಮಶೈಲದೆತ್ತರಕು ಕತ್ತೆತ್ತಿ ನಿಂತಿರುವ
ಕರ್ತವ್ಯ ಪಾಲನೆಯ ಬುದ್ಧಿ ಬರಲಿ;
ಕಾರ್ಮೋಡ ಬಾನನಂಡಲೆಪಂತೆ ಸಂಕಷ್ಟ
ಕೊರಚಾಡಿದರು ಎದೆಯು ಅಲುಗದಿರಲಿ.(೫೨)

ಕವಿಯ ಈ ಮೌಲಿಕಸುಭಾಷಿತಗಳನ್ನು ಮತ್ತೆ ಮತ್ತೆ ಮನನ ಮಾಡಿಕೊಂಡಷ್ಟೂ ಮನುಕುಲದ ಬದುಕು ಮಡಿಯಾಗುತ್ತದೆ, ಸಾರ್ಥಕವಾಗುತ್ತದೆ.

ಸಕಲ ವೃತ್ತಿನಿರತರನ್ನೊಳಗೊಂಡ ನಾಡಿನ ಇಡೀ ಜನಾಂಗ ಪ್ರತಿನಿತ್ಯವೂ ಕನಸು ನನಸುಗಳಲ್ಲಿಯೂ ನಿರಂತರವಾಗಿ ಸಹಜವಾಗಿ ಬಳಸುತ್ತಿರುವ 'ಆಡುನುಡಿ'ಯನ್ನು ನಿತ್ಯನೂತನವೆಂದು ಚಿಂತಾಮಣಿಯೆಂದು ಕವಿವರ್ಯರು ಕರೆದಿರುವುದು ಸಮಂಜಸವಾಗಿದೆ. ದಿನದಿನವೂ ಹೊಸಹೊಸ ಭಾವಾರ್ಥ ಧ್ವನಿರೂಪಗಳನ್ನು ಆಕರಿಸಿಕೊಂಡು ಬೆಳೆಯುತ್ತಿರುವ ಆ ಭಾಷೆ ಜೀವಂತ ಶಕ್ತಿನಿಧಿಯೆಂಬುದಂತು ನಿಜ. ಅದು 'ಹೊಚ್ಚಹೊಸ ಅದಿರುಗಳ ಖಣಿ'ಯೆನ್ನುವ ಕವಿವಾಣಿ ನಿಜ. ಆಡುನುಡಿಯ ಪರಿಷ್ಕೃತ ರೂಪವೇ ಗ್ರಾಂಥಿಕ ಭಾಷೆ. ಅದು ಎಂದೋ ತೋಡಿ, ತೆಗೆದು ಕರಗಿಸಿದ ಲೋಹದಗಣಿಯೆಂಬುದು ಅವರ ಮಾತು.ಕೆಲವೇ ಕೆಲವು ಪಂಡಿತರು ಬಳಸುವ ಭಾಷೆಯದು. ಸಮಗ್ರ ಬದುಕಿನ ದೃಷ್ಟಿಯಿಂದ ಎರಡೂ ಬೇಕು. ಆದರೆ ಆಡುನುಡಿಯನ್ನು ಅಲ್ಲಗಳೆಯಲಾಗದೆಂಬ ಎಚ್ಚರಿಕೆ ಈ ಚುಟುಕಿನಲ್ಲಿದೆ.

ಈ ಸಂಗ್ರಹದಲ್ಲಿ ಇಂಥ ಚುಟುಕುಗಳು ಇನ್ನೂ ಹಲವಾರಿವೆ. ಕೇವಲ ನಿದರ್ಶನಾರ್ಥವಾಗಿ ಕೆಲವನ್ನಿಲ್ಲಿ ಉದ್ಧರಿಸಿ ವಿವರಿಸಲಾಗಿದೆ. 'ಕಣವಿ ಚುಟುಕು'ಗಳನ್ನು ಸವಿದಷ್ಟೂ ಹೃನ್ಮನಗಳು ತಣಿಯುತ್ತವೆ; ಬದುಕು ಸಂಪದ್ಯುಕ್ತವಾಗಿ, ವ್ಯಕ್ತಿತ್ವ ವಿಕಸನ ಸರಳವಾಗುತ್ತದೆ. ನಾಡಿನ ಅಭಿಮಾನದ, ಪ್ರತಿಷ್ಠೆಯ, ಪರಿಣಿತ ಕವಿ ಕಣವಿಯವರ ದರ್ಶನ ಇನ್ನೂ ಹಲವು ಚುಟುಕುಗಳ ಮೂಲಕ ನಾಡು ನುಡಿ ನಾಡವರ ಉತ್ಥಾನಕ್ಕೆ ಕಾರಣವಾಗಲೆಂದು ಹಾರೈಸುತ್ತೇನೆ.

ಯಾರೇನೆ ಹೇಳಲಿ, ಚುಟುಕು ಶ್ರೀಸಾಮಾನ್ಯರ ಸಂಪತ್ತು;
ಇತರ ಕಾವ್ಯ ಪ್ರಕಾರಗಳು ಪಂಡಿತರ ಸೊತ್ತು, ಕಸರತ್ತು.
ಅದರಿಂದ ಸಾಮಾನ್ಯರಿಗೆ ಬೇಕು ಚುಟುಕು ಸವಲತ್ತು.

ಚುಟುಕು ಸಾಹಿತ್ಯ ಪ್ರವರ್ತಕರೂ, ಚುಟುಕು ಸಾಹಿತ್ಯವೇ ಬದುಕಾಗಿರುವವರೂ, ಚುಟುಕು ಚಟ ಮರುಳಮಾಡಿದಂತಿರುವವರೂ, ಈ ಸಾಹಿತ್ಯ ಪ್ರಕಾರದ ಏಳಿಗೆಗಾಗಿ ಹಗಲಿರುಳೂ ತ್ರಿಕರಣ ಶುದ್ಧಿಯಾಗಿ ದುಡಿಯುತ್ತ, ಸರ್ವ ತ್ಯಾಗಕ್ಕೂ ಸಿದ್ಧವಾಗಿರುವ ಡಾ.ಎಂ.ಜಿ.ಆರ್. ಅರಸು ಅವರು ಈ ಗ್ರಂಥವನ್ನು ತಮ್ಮದೆ ಆದ ವೈದ್ಯವಾರ್ತಾ ಪ್ರಕಾಶನದ ಮುಖಾಂತರ ಹೆಮ್ಮೆಯಿಂದ ಪ್ರಕಟಿಸುತ್ತಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಗೆ ಒಂದೂವರೆ ಸಾವಿರ ವರ್ಷದ ಇತಿಹಾಸವಿದ್ದರೂ, ಅರ್ಜುನನಂತೆ ಅಜ್ಞಾತವಾಸದಲ್ಲಿದ್ದ ಚುಟುಕು ಕಾವ್ಯವನ್ನು ಸಿಂಹಾಸನಾರೋಹಣ ಮಾಡಿಸಿದವರು ಡಾ॥ ಎಂ.ಜಿ.ಆರ್ ಅರಸ್ ಅವರು. ಅದು ಅವರ ಬರವಿಗಾಗಿ ಒಂದೂವರೆ ಸಾವಿರ ವರ್ಷದಿಂದ ತಪೋಮಗ್ನವಾಗಿದ್ದಂತೆ ತೋರುತ್ತದೆ. ಚಲವಂತರಾದ ಡಾ॥ ಅರಸು ಅವರ ಎಲ್ಲ ಯೋಜನೆಗಳೂ ಪರಿಪೂರ್ಣಗೊಂಡು, ಕನ್ನಡದ ಸ್ಥಾನ ಪರಾಕಾಷ್ಠೆಯನ್ನು ತಲುಪಲೆಂದು ನಾನು ತಾಯಿ ಭುವನೇಶ್ವರಿಯನ್ನು ಪ್ರಾರ್ಥಿಸುತ್ತೇನೆ.

ದಿನಾಂಕ– **೨೬–೦೪–೨೦೦೯** ದೇಜಗೌ

ಸ್ಥಳ– ಮೈಸೂರು

ಅರಿಕೆ

ಚುಟುಕು ಅಥವಾ ಹನಿಗವನ ಪ್ರಕಾರದಲ್ಲಿ ನನ್ನ ಕೃಷಿ ಅಷ್ಟೊಂದು ಗಮನಾರ್ಹವಾದದ್ದೇನೂ ಅಲ್ಲ. ಆದರೆ ಅದರ ಬಗೆಗಿನ ಒಲವು ನನ್ನಲ್ಲಿ ಬಹಳ ಹಿಂದಿನಿಂದಲೇ ಒಡಮೂಡಿದ್ದು. ಅರುವತ್ತರ ದಶಕದಲ್ಲಿ ಹಾಗೂ ನಂತರ ದಿನಕರ ದೇಸಾಯಿಯವರ ಚೌಪದಿಗಳು ಮನೆಮಾತಾಗಿದ್ದವು. ಅವರ ಭಾಷೆಯ ಹದ, ಮಾತಿನ ಮೊನಚು, ಸಾಮಾಜಿಕ, ರಾಜಕೀಯ ವಿಡಂಬನೆ ನನ್ನ ಕಣ್ಮನಗಳನ್ನು ಸೆಳೆದಿದ್ದವು. ಅದಕ್ಕೂ ಹಿಂದೆಯೇ ನಾನು ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ ರವೀಂದ್ರರ **Stray Birds** ನ ಮೊದಲ ನುಡಿಯಿಂದಲೇ ನಾನು ಆಕರ್ಷಿತನಾಗಿ ಬಿಟ್ಟಿದ್ದೆ:

"Stray birds of summer come to my window
to sing and fly away.
And yellow leaves of autumn which
have no wings flutter and fall there
wth a sigh."

ಅವುಗಳ ಕಾವ್ಯಾತ್ಮಕತೆ ಹಾಗೂ ತಾತ್ವಿಕ ದೃಷ್ಟಿ ನನಗೆ ಬಹಳ ಹಿಡಿಸಿದ್ದರಿಂದ ಈ ಸಂಗ್ರಹದ ಬಹಳಷ್ಟು ನುಡಿಮುತ್ತುಗಳನ್ನು ಅನುವಾದ ಮಾಡಿ ಪತ್ರಿಕೆಗಳಲ್ಲಿಯೂ ಪ್ರಕಟಿಸಿದ್ದೆ. (ಅವುಗಳಲ್ಲಿ ಕೆಲವು ಮಾತ್ರ ಸಿಕ್ಕಿವೆ)

ಅರುವತ್ತರ ದಶಕದಲ್ಲಿ ನಾನು ಆಗೊಮ್ಮೆ ಈಗೊಮ್ಮೆ ಹನಿಗವನಗಳನ್ನು ಬರೆಯಲು ಪ್ರಾರಂಭಿಸಿದೆ. ನನ್ನ 'ಎರಡು ದಡ'(೧೯೬೯) ಕವನಸಂಗ್ರಹದಲ್ಲಿ 'ಆಗೀಗ ನಾಲ್ಕು ಸಾಲು' ಎಂಬ ಶೀರ್ಷಿಕೆಯಲ್ಲಿ ಮೂವತ್ತು ಇಂಥ ಮುಕ್ತಕಗಳು ಮೊಟ್ಟಮೊದಲು ಪ್ರಕಟವಾದವು. ಆಮೇಲೆ ಕಾಲಕಾಲಕ್ಕೆ ಪ್ರಕಟಗೊಂಡ ನನ್ನ ಕವನ ಸಂಕಲನಗಳಲ್ಲಿಯೂ ಅಷ್ಟಿಷ್ಟು .ಸೇರ್ಪಡೆಯಾಗಿವೆ. ಸಮಕಾಲೀನ ಹಿರಿ–ಕಿರಿಯ ಕವಿಗಳನೇಕರು ಈ ಕಾವ್ಯಪ್ರಕಾರದಲ್ಲಿ ಕೃಷಿಗೈದು ಅದಕ್ಕಿರುವ ಇತಿಮಿತಿಯಲ್ಲಿಯೇ ಅದರ ಸ್ಥಾನ–ಮಾನವನ್ನು ಹೆಚ್ಚಿಸಿರುವುದನ್ನು ಆಸ್ಥೆಯಿಂದ ಗಮನಿಸುತ್ತ ಬಂದಿದ್ದೇನೆ.

ಇತ್ತೀಚೆಗೆ ನನ್ನ ಆತ್ಮೀಯ ಸ್ನೇಹಿತರೂ 'ಚುಟುಕುರತ್ನ' ಪ್ರಶಸ್ತಿ ಪುರಸ್ಕೃತರೂ ಆದ ಡಾ. ಎಂ. ಅಕಬರ ಅಲಿಯವರ ೭೫ನೇ ಹುಟ್ಟುಹಬ್ಬದ ಶುಭಕಾರ್ಯಕೆಗೆ ಮೈಸೂರಿಗೆ ಹೋದಾಗ, ಆ ಸಮಾರಂಭದ ಪ್ರಮುಖ ಸಂಚಾಲಕರಾದ ಡಾ. ಎಂ.ಜಿ.ಆರ್. ಅರಸ್ ಅವರು ನನ್ನ ಹನಿಗವನಗಳ ಸಂಗ್ರಹವೊಂದನ್ನು ತಮ್ಮ ಪ್ರಕಾಶನದಿಂದ ಹೊರತರುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು.

ಡಾ. ಅರಸು ರಾಜ್ಯಮಟ್ಟದ ಚುಟುಕು ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ, ಅದರ ಪ್ರಧಾನ ಸಂಚಾಲಕರಾಗಿ ಇದುವರೆಗೆ ಹದಿನೆಂಟು ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ. ಇದೂ ಅಲ್ಲದೆ ತಮ್ಮ ವೈದ್ಯವಾರ್ತಾಪ್ರಕಾಶನದ ಇತರ ಪುಸ್ತಕಗಳ ಜೊತೆಗೆ ಏಳೆಂಟು ಗಣ್ಯ ಸಾಹಿತಿಗಳ ಚುಟುಕು ಸಂಗ್ರಹಗಳನ್ನೂ ಪ್ರಕಟಿಸಿ ಆ ಸಾಹಿತ್ಯದ ಪುರೋಭಿವೃದ್ಧಿಗೆ ನಿರಂತರ ಶ್ರಮಿಸುತ್ತಿರುವುದನ್ನು ಎಲ್ಲರೂ ಬಲ್ಲರು.

ನಾನು ಯೋಚನೆಯನ್ನೇ ಮಾಡಿರದಿದ್ದ ನನ್ನ ಚುಟುಕುಗಳ ಸಂಗ್ರಹದ ವಿಷಯವನ್ನು ತಾನಾಗಿ ಸೂಚಿಸಿ, ಅವುಗಳನ್ನು ಸಂಪಾದಿಸಿ ಅಲ್ಪಾವಧಿಯಲ್ಲಿಯೇ ವೈದ್ಯವಾರ್ತಾಪ್ರಕಾಶನದ ಮೂಲಕ ಪ್ರಕಟಿಸುತ್ತಿರುವ ಡಾ. ಎಂ.ಜಿ.ಆರ್. ಅರಸ್ ಅವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಹಿರಿಯ ನಾಡೋಜ ಪದ್ಮಶ್ರೀ ಡಾ. ದೇಜಗೌ ಅವರು ಈ ಚಿಕ್ಕ ಕೃತಿಗೆ ಹೊನ್ನುಡಿಯಂಥ ಮುನ್ನುಡಿ ಬರೆದು ಮತ್ತು ಖ್ಯಾತ ಚುಟುಕು ಕವಿ ಡಾ. ಅಕಬರ ಅಲಿ ಅವರು ಹಿನ್ನುಡಿ ಬರೆದು ಇದರ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ವಂದನೆಗಳು.

ಪ್ರಸ್ತುತ ಸಂಗ್ರಹದ ಪ್ರಕಟನೆಗೆ ಪರೋಕ್ಷವಾಗಿ ಕಾರಣರಾಗಿ ಹಿನ್ನುಡಿ ಬರೆದ ಡಾ. ಎಂ.ಅಕಬರ ಅಲಿಯವರ ಸ್ನೇಹವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಈ ಸಂದರ್ಭದಲ್ಲಿ '**Stray Birds**'ನಲ್ಲಿಯ ಮತ್ತೊಂದು ನುಡಿ ನೆನಪಾಗುತ್ತದೆ :

"God comes to me in the dusk of my evening with the flowers from my past kept fresh in his basket".

'ಚೆಂಬೆಳಕು'

ಕಲ್ಯಾಣ ನಗರ, ಧಾರವಾಡ — ಚೆನ್ನವೀರ ಕಣವಿ

ಬುದ್ಧ ಪೂರ್ಣಿಮೆ

೯-೦೫-೨೦೦೯

ಹಿನ್ನುಡಿ

ಕವಿಬಂಧು ಚೆನ್ನವೀರ ಕಣವಿಯವರ ಪ್ರೀತಿಪೂರ್ಣ ಕರೆಗೆ ಓಗೊಟ್ಟು, ಪ್ರಿಯಬಂಧು ಡಾ. ಎಂ.ಜಿ.ಆರ್. ಅರಸು ಅವರ ಒಲುಮೆಯ ಒತ್ತಾಯಕ್ಕೆ ತಲೆಬಾಗಿ ನಾನು ಈ ಹಿನ್ನುಡಿಯನ್ನು ಬರೆಯಲು ಮುಂದಾಗಿದ್ದೇನೆ.

ಹೊಸಗನ್ನಡ ಸಾಹಿತ್ಯದ ಸಾರಸತ್ವವನ್ನು ಮೈಗೂಡಿಸಿಕೊಂಡು ನಮ್ಮ ಸಹೃದಯರ ಹೃದಯಪೀಠವನ್ನು ಅಲಂಕರಿಸಿರುವ ಚೆನ್ನವೀರ ಕಣವಿಯವರು ನಮ್ಮ ಅಪರೂಪದ ಕವಿ. ಅವರೇ ಹೇಳಿಕೊಂಡಿರುವಂತೆ ಅಭಿಜಾತ ಕವಿ :

ನನ್ನೆದೆಯ ಗೂಡಿನೊಳಗಾವುದೋ ಹಕ್ಕಿಯುಲಿ

ಚಿಲಿಪಿಲಿಸುತಿಹುದಾವ ನಿಮಿಷದಲ್ಲು;

ಜಗದ ಮೊರೆ-ಕರೆಗಳಿಗೆ ಚೆಲುವು ಚಿನ್ನಾಟಕ್ಕೆ

ದನಿಗೂಡಿ ಹಾಡುತಿದೆ ಕನಸಿನಲ್ಲು !

ಹೀಗಿರುವುದರಿಂದಲೆ ಅವರು ನಮ್ಮ ಹೊಸಗನ್ನಡದ ಮುಂಚೂಣಿಯ ಕವಿಗಳಲ್ಲಿ ಒಬ್ಬರಾಗಿ ಅನ್ಯಾದೃಶರಾಗಿದ್ದಾರೆ. ಹೊಸಗನ್ನಡ ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರ ಕಾವ್ಯಪ್ರಕಾರದಲ್ಲಿ ಅಪೂರ್ವ ಉಳುಮೆಯನ್ನು ಮಾಡಿ, ಇದೀಗ ಚುಟುಕು ಕೃಷಿಗೆ ತೊಡಗಿ ಅದರ ಮೌಲ್ಯವನ್ನೂ ಮೌಲಿಕತೆಯನ್ನೂ ಸಂಪತ್ ಭರಿತವಾಗುವಂತೆ ಕಾವ್ಯ ಕೃಷಿ ಮಾಡಿದ್ದಾರೆ.

ಸಂಗ್ರಹ ಯೋಗ್ಯ ಪುಸ್ತಕಗಳ ಪ್ರಕಾಶನ ಸಂಸ್ಥೆಯೆಂದು ಹೆಸರಾಗಿರುವ ವೈದ್ಯವಾರ್ತಾ ಪ್ರಕಾಶನ ಚೆನ್ನವೀರ ಕಣವಿ ಅವರ ಆಯ್ದ ಚುಟುಕುಗಳ ಈ ಕೃತಿಯನ್ನು ಪ್ರಕಟಿಸಿ ಬಿಡುಗಡೆಗೊಳಿಸುತ್ತಿರುವುದು ಸಂತಸ ತಂದಿದೆ.

ಕರಡು ಪ್ರತಿಯನ್ನು ಮುದ್ರಣಕ್ಕೆ ಅಚ್ಚುಕಟ್ಟಾಗಿ ಸಿದ್ದಪಡಿಸಿಕೊಟ್ಟ ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳಾದ, ಶಿಕ್ಷಣ ತಜ್ಞೆ ಶ್ರೀಮತಿ ಕೆರೋಡಿ ಎಂ.ಲೋಲಾಕ್ಷಿ ಅವರು ಸಹ ಪ್ರಶಂಸನಾರ್ಹರು.

ನಮ್ಮ ಸಹೃದಯ ಓದುಗರು, ಈ ಹಿನ್ನೆಲೆಯನ್ನು ಗಮನಿಸಿ, ಇಲ್ಲಿಯ ಚುಟುಕುಗಳನ್ನು ಆಸ್ವಾದಿಸುವರೆಂದು ನಂಬಿದ್ದೇನೆ.

೧೯-೦೫-೨೦೦೯
ಮೈಸೂರು

ಡಾ. ಎಂ.ಅಕಬರ ಅಲಿ

ಅರ್ಪಣೆ



ಚುಟುಕು ಸಾರ್ವಭೌಮ

ದಿನಕರ

ದೇಸಾಯಿಯವರ

ಜನ್ಮಶತಮಾನೋತ್ಸವ ವರ್ಷದ

(೧೦-೦೯-೨೦೦೮ ರಿಂದ ೧೦-೦೯-೨೦೦೯)

ಚಿರಸ್ಮರಣೆಗೆ

******

ಚೆನ್ನವೀರ ಕಣವಿ

ಪರಿವಿಡಿ

ಜಗದ್ಗುರು

ನಾಡಿನ ತುಂಬಾ ನೂರು ಜಗದ್ಗುರು
ಇರುವುದು ಜಗವೊಂದೇ;
ಕಾಡಿನ ತುಂಬಾ ಬಣ್ಣದ ಹೂಗಳು;
ವಾಸನೆ ಕೆಲವೊಂದೇ.

ಸಾವು–ಸಂಸ್ಕಾರ

ದೊಡ್ಡವರ ಆಕಸ್ಮಿಕ ಸಾವು
ಅತ್ಯಂತ ಘೋರವಾದದ್ದು;
ಆದರೆ ಒಮ್ಮೊಮ್ಮೆ ಅದಕ್ಕೂ ಘೋರ
ಅವರ ಅಂತ್ಯ ಸಂಸ್ಕಾರ.

ಕವಿಗೋಷ್ಠಿ

ಮೂವತ್ತೈದು ಕವಿಗಳು ಕಿಕ್ಕಿರಿದ ಕವಿಗೋಷ್ಠಿ
ನಿಜಕ್ಕೂ ಸಮ್ಮೇಳನ ಸಾಧಿಸಿದ ಹಿರಿಮೆ.
ಆದರೂ ನಮ್ಮ ರಾಜ್ಯದ ಮಂತ್ರಿಮಂಡಳಕ್ಕಿಂತ
ಗಾತ್ರದಲ್ಲಿ ಇದು ತೀರ ಕಡಿಮೆ.

ಅಡ್ಡಮಳೆ

ಬಿಸಿಲಿಗೆ ಒಳಗೇ ನರಳುವ ಭೂಮಿಗೆ
ಬಂದಿತು ರಭಸದ ಅಡ್ಡಮಳೆ;
ನಾಲ್ಕನೆ ದಿನ ಎರಕೊಂಡಿಹ ನೀರೆಗೆ
ಮುಖದಲಿ ಹೊಮ್ಮಿತು ಬೇರೆ ಕಳೆ.

ಆಕಸ್ಮಿಕ

ಎಲ್ಲೋ ಓದಿದ ನೆನಪು;
ಆಕಸ್ಮಿಕವೂ ಒಂದು ಸಣ್ಣ ಪವಾಡ,
ಅಲ್ಲಿ ದೇವರಿದ್ದರು ಕೂಡ
ಅವ ಅನಾಮಧೇಯ.

ವಿಧಿ–ನಿಷೇಧ

ತನ್ನನ್ನು ಪ್ರದರ್ಶನಕ್ಕಿಟ್ಟು
ಪರಿತಪಿಸುತ್ತಾರೆಂದು
ಸಾವು ಬಹುಶಃ ಭಾವಿಸಿರುವುದಿಲ್ಲ.
ಆಶ್ಚರ್ಯವೆಂದರೆ
'ವಿಧಿ'ಗೂ ವಿಧಿನಿಷೇಧ ತಪ್ಪಿದ್ದಲ್ಲ.

ಜಲದೇವತೆ

ಬತ್ತಿಹೋದ ಕೆರೆಯಲ್ಲಿ
ಬಂಗಲೆಗಳು ಎದ್ದು ಬಿಟ್ಟಿವೆ
ಜಲದೇವತೆಗೆ
ಎಷ್ಟೊಂದು ಗೋರಿಗಳು..!

ರ್‍ಯಾಲಿ

ನೀನು ನಡೆಸಿದ ರ್‍ಯಾಲಿ
ಅದ್ಭುತವಾಗಿತ್ತು ;
ಮನೆಗೆ ಬಂದು ಅಂಗಿ ಕಳೆದಾಗ–
ನನ್ನ ಮೈ ತುಂಬ ಗಾಯ.

ಮುತ್ತು-ಕಂಬನಿ

ನಾನು ನೀರಿನಲ್ಲಿ ಮುಳುಗಿ
ಚಿಪ್ಪುಗಳನ್ನು ಹೊರತಂದೆ;
ಕೆಲವು ಮುತ್ತುಗಳು
ಉಳಿದವೆಲ್ಲ ಕಂಬನಿಗಳು.

ಕವಿತೆ

ಕದ್ದುಮುಚ್ಚಿ ಟಿ.ವಿ. ನೋಡುವ
ಮಕ್ಕಳಂತೆ
ಉಳಿದವರು ಮಲಗಿರುವಾಗ
ನಾನು ಕವಿತೆ ಬರೆಯುತ್ತೇನೆ.

ಚಿಗುರೆಲೆ-ಕಗ್ಗೊಲೆ

ಅಲ್ಲಿ ಥಳಥಳ, ಇಲ್ಲಿ ಥಳಥಳ
ಹಲುಗಲದ ಚಿಗುರೆಲೆಗಳು
ದಿನವು ಮುಂಜಾವದಲಿ ಪತ್ರಿಕೆ
ಸಾರುವುದು; ಕಗ್ಗೊಲೆಗಳು.

ವಸಂತೋತ್ಸವ

ತಳಿರನುಟ್ಟಿದೆ ಹೂವ ತೊಟ್ಟಿದೆ
ಮಾವು ಹೊರಟಿದೆ ಎತ್ತರೀ?
ಕಾಮ ಬಿಸಿಲಲಿ ನಡೆದು ಬರುವನು
ಅದಕೆ ಹಿಡಿದಿದೆ ಛತ್ತರಿ.

ಸಂಜೆಯ ಸೂರ್ಯ

ಬಾನ ಹೆಗಲಿಗೆ ಸಂಜೆ-ಸೂರ್ಯನ
ಜರದ ಸೆಲ್ಲೆಯ ಹೊದಿಸಲು-
ಇಳೆಗೆ ಇಳಕಲ್ ಸೀರೆ,ಕುಪ್ಪುಸ,
ಹಣೆಗೆ ಕುಂಕುಮ ಬಟ್ಟೊಲು.

ತುರ್ತು ಪರಿಸ್ಥಿತಿ

ಹುಲ್ಲುಕಾಡಿಗೆ ಬೆಂಕಿ ಹತ್ತಿತು
ಚಿಣಿಚಿಟಿಲ್ ಉರಿದೆದ್ದಿತು.
ಅಂತೆ ಜನತೆಯ ತುರ್ತು ಸಿದ್ಧತೆ
ಮೂರು ಸಂಜೆಗೆ ನಂದಿತು.

ಭಾಷಣ

ಭಾಷಣದ ಸುರಿಮಳೆಗೆ ತಕ್ಷಣ
ಮುರುಕು ಮನೆಗಳು ಬಿದ್ದವು;
ಮರುದಿನವೆ ಎಲ್ಲೆಲ್ಲು ತಣ್ಣಗೆ
ನಾಯಿಕೊಡೆಗಳು ಎದ್ದವು.

ಹೊಸ ಆಯುಧ

ಹೊಸ ಕಾಲಕೆ ಹೊಸ ಆಯುಧ ಮಸೆಯುತ
ಎಸೆಯಲು ಬಲ್ಲೆಯ ಬಲ್ಲಿದನೆ?
ಹಿಮಗಿರಿ ಕೋಟೆಯು ಅಭೇದ್ಯವೆಂದರೆ
ನಗಾಧಿರಾಜನು ನಗದಿಹನೆ?

ರಾಷ್ಟ್ರ ಪಕ್ಷಿ

ಮೊದಲೇ ಡೌಲಿನ ನವಿಲೇ ನಿನಗಿದೊ
        'ರಾಷ್ಟ್ರಪಕ್ಷಿ' ಎಂಬಭಿದಾನ
'ಪದ್ಮಭೂಷಣ'ವ 'ಭಾರತರತ್ನ'ವ
        ಕೊಡದಿರುವುದು ನಿನಗವಮಾನ.

ಸಂಸ್ಥೆ–ಸಂತೆ

ಆಡೆ, ನೀನು ಮುಟ್ಟದಿರುವ
        ಗಿಡವೇ ಇಲ್ಲ, ಅಂತೆಯೆ–
ನೋಡು ನಾವು ಕಟ್ಟುತಿರುವ
        ಸಂಸ್ಥೆಯೆಲ್ಲ ಸಂತೆಯೆ.

ದೇಹ - ಯಂತ್ರ

ಎನಿತೌಷಧ ಕುಡಿದು, ಗುಳಿಗೆ
ನುಂಗಿ, ಚುಚ್ಚಿಕೊಂಡರೂ
ಈ ದೇಹದ ಯಂತ್ರ ಬೇರೆ
ಬಲ್ಲ ಬ್ರಹ್ಮದೇವರು.

ಬೇಕು

ತೇಗಬೇಕು ಸಂತೃಪ್ತಿಗೊಂಡು
ಆತಿಥ್ಯ ಪಡೆದಮೇಲೆ,
ರಾಗಬೇಕು ಆಲಾಪದೊಡನೆ
ಸಂಗೀತವೆಂದಮೇಲೆ.

ಸೋನೆ

ಸುರೀ ಸುರಿವ ಸೋನೆಯೇ
ಮುಗಿಲಿಗಾವ ಬೇನೆಯೇ?
ಕಣ್ಮುಚ್ಚಿದ ದಾನಿಯೇ
ಕಣ್ದೆರೆದರೆ ಹಾನಿಯೇ?

ಹತ್ತಿಯ ಹೊಲ

ಹಸಿರು ಮಗ್ಗಿಯ ಸಾಲಿನಲಿ ಚಿಟ-
ಗುಬ್ಬಿ ಕುಳಿತಿವೆ ಬೆಳ್ಳಗೆ-
ಕುಸುಬೆ ಹೂವಂಚಿನ ಕಸೂತಿಯು
ಜರದ ಕಣ ಮುತ್ತೈದೆಗೆ.

ಮಧ್ಯಾಹ್ನ

ತಿರುಗೇ ತಿರುಗುತ್ತಿದೆ ಬಿಡುವಿಲ್ಲದೆ
ತಲೆಮೇಲಿನ ಪಂಖ;
ಆಫೀಸಿನ ಟೈಪರೈಟರು ಹೊಡೆದೇ
ಹೊಡೆಯುತ್ತಿದೆ ಶಂಖ.

ಬಾಳಕುಡಿ

ಮಗ ಮಗಿಸುವ ಹೂವ ಸುತ್ತ ಧಗಧಗಿಸುವ ಉರಿ
ಶುಭ ನುಡಿಯುವ ಹಕ್ಕಿಗಳಿಗೆ ಬಂದೂಕಿನ ಗುರಿ.
ಬಾಂಬಿಗಿಂತ ಬಲವತ್ತರ ದ್ವೇಷದೊಂದು ಕಿಡಿ
ಒಳಗೊಳಗೇ ಹೊತ್ತಿ ಹೊಗೆದು ಬತ್ತಿ ಬಾಳಕುಡಿ.

ಕೊಡೆ

ನಾ ಕೊಡೆ, ನೀ ಕೊಡೆ, ಕೊಡದಿದ್ದರೆ ಬಿಡೆ
ಏರಿಸಿ ಹಿಡಿ, ನಡೆ ಯಾರ ಭಿಡೆ–
ಬಿಸಿಲಿಗೆ ಕಾಯದೆ ಮಳೆಯಲಿ ತೋಯದೆ
ಎಲ್ಲರ ಮೇಲಿದೆ ನೀಲ ಕೊಡೆ.

ಪಯಣ

ದಿನವೂ ಗದ್ದಲ, ಗಡಿಬಿಡಿ ರೈಲಿಗೆ
ಕೂಡಲು ಜಾಗವೆ ಇಲ್ಲ;
ನಮ್ಮ ಪ್ರಯಾಣವ ಮುಗಿಸಿದಮೇಲೆ–
ತೀರಿತು, ಯೋಚನೆಯಿಲ್ಲ.

ಸ್ವಾತಂತ್ರ್ಯದ ಸವಿ

ನಾಡಿಗೆ ದೊರೆತಿಹ ಸ್ವಾತಂತ್ರ್ಯದ ಸವಿ–
ಹತ್ತಿದೆ ಕೆಲವರಿಗೆ–
ಎಡಗೈ, ಬಲಗೈ ಬೆಚ್ಚಗೆ ಇಡದಿರೆ
ಕೊಡುವರು ಕಸಬರಿಗೆ.

ಅಂತರ

ಇಬ್ಬರೂ ಒಂದಾಗಿ ಹೊಂದಿಕೊಂಡಿದ್ದರೂ
ನಡುವೆ ಒಂದಿಷ್ಟು ಜಾಗವಿರಲಿ;
ಸ್ವರ್ಗದ ಗಾಳಿ ಅಲ್ಲಿ ಬಂದು ಸುಳಿದಾಡಿ
ನಿಮ್ಮೊಡನೆ ಉಸಿರಾಡಲಿ.

ಕಾರ್ಮಿಕ

ಸೂರ್ಯನ ಬೆಂಕಿಯಿಂದ
ಅವನು ಚುಟ್ಟ ಹಚ್ಚಿಕೊಳ್ಳುತ್ತಾನೆ.
ಕಾರ್ಮಿಕನಿಗೆ
ಅದೇನೂ ಅಸಾಧ್ಯವಲ್ಲ.

ಗೆದ್ದವರು

ಅವನನ್ನು ಚೆನ್ನಾಗಿ
ಬಯ್ಯಬೇಕೆಂದು ಹೋದೆ;
ಅವನು 'ಹೊಡಿದು ಬಿಡು ನನ್ನ' ಎಂದ–
ಗೆದ್ದವರು ಯಾರು ?

ಇರುವೆ

ಇರುವೆಗಳು
ಮೀನುಗಳಿಗಿಂತ ಮೇಲು;
ಯಾಕೆಂದರೆ
ಒಂದು ಇರುವೆ ಮತ್ತೊಂದನ್ನು
ನುಂಗಿ ಹಾಕುವದಿಲ್ಲ.

ಮಡಕೆ–ಮಣ್ಣು

ಮಡಕೆ ಒಡೆಯಿತೆ?
        ಚಿಂತೆ ಬೇಡ,
ಮತ್ತೊಂದು ಆಕಾರ ಕೊಡಲು
        ಮಣ್ಣು ಸಿದ್ಧವಾಗಿರುತ್ತದೆ.

ರೈತ–ಸೈನಿಕ

ಯುದ್ದ ಬಂದರು, ಬುದ್ದ ಬಂದರು
ರೈತ ಹಿಡಿವನು ಗುದ್ದಲಿ;
ಹಿಮಾಲಯದಡಿ ನಮ್ಮ ಸೈನಿಕ–
ರೆದೆಯು ನಿಗಿನಿಗಿ ಇದ್ದಲಿ.

ಕವಿಯ ಮಾತು

ಎತ್ತು ಬಾವುಟ, ನುಗ್ಗು ಮುಂದಕೆ
ಕವಿಯ ಮಾತಿನ ಗುಂಡಿಗೆ
ಹಿಮದ ಮೈ ಬಿಸಿ ರಕ್ತವೇರಿತು
ಬೆಚ್ಚಗಾಯಿತು ಥಂಡಿಗೆ.

ಮ್ಯಾಕ್‌ಮೋಹನ್ ರೇಖೆ

ನಮ್ಮ ಹಣೆಯ ಬರಹದಂತೆ
ಮ್ಯಾಕ್‌ಮೋಹನ್ ರೇಖೆಯು;
ಅದನು ಅಳಿಸಬಂದೆ ಚೀನ;
ಅಳಿಸನಾ ಪಿನಾಕಿಯು.

ಮಗುವಿನ ನಗು

'ಕರುಣಾ' ಎಂದರೆ ಅರುಣೋದಯ ತೆರ
ತುಟಿಯಂಚಿಗೆ ನಗೆ ಬೆಳಕು;
ನಮ್ಮೆದೆಭೂಮಿಯ ಕಸವನು ಕಿತ್ತು
ಬಿತ್ತುವ ಸಕ್ಕರೆ ಹಳಕು.

ಕದನ ವಿರಾಮ

ಮಚ್ಚರದಾನಿಯ ನಾಲ್ಕೂ ಬದಿಯಲಿ
ಸೊಳ್ಳೆಯ ಸೈನ್ಯದ ಜಮಾವಣೆ-
ಕದನ ವಿರಾಮದ ರೇಖೆಯ ಗುಂಟ
ಪಾಕಿಸ್ತಾನದ ಚಿತಾವಣೆ.

ತುಂಬಿರಲೀ ಮನೆ

ತುಂಬಿರಲೀ ಮನೆ, ತುಂಬಿರಲಿ
ಬಂಧುಬಳಗಕೆಲ್ಲಿಂಬಿರಲಿ,
ಒಂದೆ ಮರದ ಹಲ ಕೊಂಬೆಗಳಂದದಿ
ಏಕ ಜೀವರಸ ಹೊಂದಿರಲಿ.

ಹೋಳಿ ಹುಣ್ಣಿಮೆ

ಹೋಳಿ ಹುಣ್ಣಿಮೆಯ ಬಣ್ಣ ತೊಳೆದು
ಬಟ್ಟೆ ಬದಲಿಸುವಾಗ
ಗಿಡಮರದ ಚಿಗುರು ಹೂಗಳ ಹಿಂದೆ
ಅವಿತು ಕುಳಿತಿದ್ದ ಕಾಮಣ್ಣ
ಹೊಡೆದು ಕಣ್ಣ.

ಸಂವತ್ಸರ

ಬರಿ ಹೆಸರಿನ ಮೇಲೆಯೇ ಇಂದು
ಯಾರನೂ ನಂಬುವಂತಿಲ್ಲ;
'ಬಹುಧಾನ್ಯ'ದಲ್ಲು ಧಾನ್ಯದ ಕೊರತೆ, ಬೆಲೆ ಏರಿಕೆ,
'ಪ್ರಮಾಥಿ'ಯಲ್ಲೂ ಹಲವು ಪ್ರಮಾದಗಳು.
ಅದಕ್ಕಾಗಿ ಈಗಲೇ ಮನವಿ ಸಲ್ಲಿಸೋಣ
'ವಿಕ್ರಮ'ಕ್ಕೆ ಯಾವುದೂ ಕ್ರಮ ತಪ್ಪಿ ನಡೆಯದಂತೆ.

ಕೊಂಬೆಯಲ್ಲಿ ಕವಿತೆ

ಆ ಶಬ್ದ ತೆಗೆದು, ಈ ಶಬ್ದ ಹಾಕಿ
ಮಾತ್ರೆ, ಗಣಗಳ ಜೊತೆಗೆ ಗುದ್ದಾಡಿ
ಅಂತೂ ಪದ್ಯ ಬರೆದು ಮುಗಿಸಿ
ಕೋಣೆಯ ಹೊರಗೆ ಹಣಿಕಿದಾಗ–
ಗಿಡದ ಕೊಂಬೆಯಲ್ಲಿ ಹೊರಹೊಮ್ಮಿತ್ತು
ಚಿಗುರು – ಹೂಗಳ ಕವಿತೆ ಸಾಲು ಸಾಲು.

ಚೈತ್ರ–ಚಿತ್ರಹಿಂಸೆ

ಬದುಕಿನ ವಿಚಿತ್ರಗಳ ಚಿತ್ರಹಿಂಸೆಯ ನಡುವೆ
ಪ್ರೀತಿ ಚಿಗುರಿಸಲಾರೆಯೇಕೆ ಚೈತ್ರ ?
ಮನುಕುಲದ ಬೇರಿಗಾ ನೀರು ನಿಲುಕದೆ ಇಹುದೆ ?
ಯಾಕೆ ಬರಡಾಗಿಹುದು ಮನುಜ ಹೃದಯ ?

ಸುಪ್ರಭಾತ

ಎಂದಿನಿಂದಲೋ
ನಿದ್ದೆಯಿಲ್ಲದೆ ಸದಾ
ಎಚ್ಚರದಲ್ಲಿಯೇ ಇದ್ದ ಭಗವಂತ.
'ಸುಪ್ರಭಾತ'ದ ಧ್ವನಿಸುರುಳಿಗಳ
ಹಾವಳಿಗೆ ಬೆಚ್ಚಿ
ಇನ್ನು ಮಲಗುವುದೆ ಲೇಸೆಂದು
ನಿಶ್ಚಯಿಸಿಬಿಟ್ಟ.

ಹೊಕ್ಕುಳ-ಹೂವು

ತೆರೆಯ ಮೇಲೆ ತೆರೆದು ತೋರಿಸುವ
ಸಿನಿಮಾ ನಟಿಯರ ಹೊಕ್ಕುಳ ಕಂಡು
ಕಸಿವಿಸಿಗೊಂಡ ಉದಯೋನ್ಮುಖ ಕವಿ–
'ಹೊಕ್ಕುಳಲ್ಲಿ ಹೂವಿಲ್ಲ' ಎಂದ ಎ.ಕೆ.
ರಾಮಾನುಜನ್‌ರ ದೂರದೃಷ್ಟಿಗೆ
ನಮೋ ಎಂದ.

ಗೃಹಿಣಿ

ಏನು ಕುಡಿದರೆ ತಾನೆ ನೀರು ಕುಡಿದಂತಹುದು?
ಎಲ್ಲ ಹೂವಿನ ರಸಕು ಒಸರುವುದೆ ಜೇನು?
ಏರುವದು ಇಳಿಯುವದು ಸ್ವರದ ತಾನಿನ ತಾನು-
ನೀರಮಡಿ, ಜೇನಸವಿ, ಗೀತಸುಧೆ ನೀನು.

ಗುಳಿಗೆ

ದುಂಡುಮೊಗದಲಿ ಮಂದಹಾಸ ಬೀರುವ ಗುಳಿಗೆ
ನಿನ್ನನಿದೋ ನುಂಗಿ ನಾ ನೀರು ಕುಡಿವೆ;
ಡಾಕ್ಟರರು ಹೇಳಿದುದನೆಲ್ಲ ತಪ್ಪದೆ ಮಾಡು
ಹೊಟ್ಟೆಯೊಳಗೇ ನೀನು ಮೋಕ್ಷಪಡೆವೆ.

ದಿಲ್ಲಿ ದರಬಾರು

ಹತ್ತಿ ಸ್ಕೂಟರು ಹಿಂದೆ, ಮುಂದೆ, ಎಡ ಬಲಗಳಲಿ
ಸಕುಟುಂಬ ಪರಿವಾರ ಸಹಿತ ಹೊರಟ
ಧೀರ ಪಂಜಾಬಿಗಳು ದಿಲ್ಲಿ ರೋಡಿನ ಮೇಲೆ-
ಸಂಸಾರ ತೂಗಿಸುವದೊಂದು ಆಟ.

ಮುಂಬೈ

ಮನೆ, ಮನೆ, ಮನೆ; ಗೂಡು, ಗೂಡು, ಗೂಡು
ಜನ, ಜನ, ಜನ; ಹೊರಚೆಲ್ಲಿದೆ ರೋಡು,
ರೈಲು, ಬಸ್ಸು ರೆಕ್ಕೆಯಾಗಿ ಮುಕ್ಕುತಿಹನು ವೇಳೆಯ
ಮುಂಬೈಯಲಿ ಇವನು ಹೀಗೆ ಬೇಯಿಸುವನು ಬೇಳೆಯ.

ಆಡುನುಡಿ

ಈ ಮೊದಲೇ ತೋಡಿ, ತೆಗೆದು ಕರಗಿಸಿದ
ಲೋಹದ ಗಣಿ; ಗ್ರಂಥದ ಭಾಷೆ.
ಜನರು ನಿತ್ಯ ಆಡುವ ಭಾಷೆ
ಹೊಚ್ಚ ಹೊಸ ಅದಿರುಗಳ ಖಣಿ-
ನಿಜವಾಗಿ ಕವಿಗೆ ಅದೇ ಚಿಂತಾಮಣಿ.

ಚಪ್ಪಲಿ

ನೀನು ಚಪ್ಪಲಿಗಳನ್ನು ಮೆಟ್ಟಿಕೊಂಡು
ನಡೆದು ಹೋಗುತ್ತೀ-
ಚಪ್ಪಲಿಗಳು ಹೇಳುತ್ತವೆ :
ಅವೇ ನಿನ್ನನ್ನು ಹೊತ್ತುಕೊಂಡಿದ್ದೇವೆಂದು.

ಪ್ರಾರ್ಥನೆ

ಅಲ್ಲಸಲ್ಲದ ವಿಷಮ ವಿಪರೀತ ಭಾವನೆಯ
ವಿಷಗಾಳಿ ಎನ್ನ ಬಳಿ ಸುಳಿಯದಿರಲಿ;
ಸೊಲ್ಲುಸೊಲ್ಲಿಗೆ ಪರರನಣಕಿಸುವ ಕೆಣಕಿಸುವ
ಅಶಿವ ನುಡಿ ಎನ್ನ ಕಿವಿ ಸೇರದಿರಲಿ.

ಅಲುಗದಿರಲಿ

ಹಿಮಶೈಲದೆತ್ತರಕು ಕತ್ತೆತ್ತಿ ನಿಂತಿರುವ
ಕರ್ತವ್ಯ ಪಾಲನೆಯ ಬುದ್ಧಿ ಬರಲಿ;
ಕಾರ್ಮೋಡ ಬಾನನಂಡಲೆವಂತೆ ಸಂಕಷ್ಟ
ಕೊರಚಾಡಿದರು ಎದೆಯು ಅಲುಗದಿರಲಿ.

ನಮನವಿರಲಿ

ದೈತ್ಯದರ್ಪದ ದುರುಳ ದಾರುಣದ ಹೋರಟೆಗೆ
ಎಂದೆಂದು ನನ್ನ ತಲೆ ಬಾಗದಿರಲಿ;
ಸಾತ್ತ್ವಿಕರ ತಾತ್ತ್ವಿಕರ ಹಿರಿಜೀವದೌನ್ನತ್ಯ
ವಿಶ್ವಭಾವಾತ್ಮರಿಗೆ ನಮನವಿರಲಿ.

ಹಂಬಲ

ಬಾನಿನಂಚಿನ ಮೋಡ ನಮ್ರತೆಯದೆನಗಿರಲಿ
ಮಾನಸದ ತಿಳಿಗೊಳದ ಶಾಂತಿಯಿರಲಿ;
ಮಣ್ಣಹುಡಿಗೂ ಮೆರುಗನಿತ್ತು ಮುದ ತಾಳುತಿಹ
ಹಸುಳೆಯಾಟದ ಮುಗ್ಧ ಹಂಬಲಿರಲಿ.

ಓಂಕಾರಗುಡಲಿ

ಶಿವನ ಕವನವು ಭುವನ, ಲಾಸ್ಯ – ತಾಂಡವ ಮಿಲನ
ಪ್ರಕೃತಿಯೌಪಾಸನೆಯು ನಿತ್ಯವಿರಲಿ;
ನಾನು ಮಿಡಿಯುವ ಭಾವವೀಣೆ ತಂತಿಗಳೆಲ್ಲ
ದೇವ! ಜೀವಾಳದೋಂಕಾರಗುಡಲಿ.

ಬಾಳಿನ ಬೀಳಿದು...

ಬಾಳಿನ ಬೀಳಿದು, ಕೂಳಿನ ಗೋಳಿದು
ಸಾವಿನ ಸಂತೆಯು ನೆರೆಯುತಿದೆ;
ವೇದ ಪುರಾಣದ ವಾದಕೆ ಸಿಲುಕದ
ವೇದನೆಯೊಂದಿದು ಕೊರೆಯುತಿದೆ.

ಹೊಟ್ಟೆಯು ಹಪ್ಪಳೆ

ಹೊಟ್ಟೆಯು ಹಪ್ಪಳೆ, ಮೈಯೋ ಬತ್ತಲೆ
ಕಣ್ಣಿಗೆ ಕತ್ತಲೆ ಕಟ್ಟುತಿದೆ;
ಬಡತನ ಶಾಪಕೆ, ಒಡಲುರಿ ತಾಪಕೆ
ಮಸ್ತಕ ಚಿಣ್ ಚಿಟಿಲೆನ್ನುತಿದೆ.

ಎಲುವಿನ ಗೂಡು

ಚಿಂತೆಯ ಕಾಡಿನ ಎಲುವಿನ ಗೂಡಿನ
ಜೀವನ ಹಕ್ಕಿಯು ನರಳುತಿದೆ;
ಹಾರುತ ಹೋರುತ ಮೇಲಕ್ಕೇರುತ
ಪಕ್ಕ ಸೋತು ನೆಲಕುರುಳುತಿದೆ.

ಜೀವನ ಮಂದಿರ

ಎಲುವಿನ ಹಂದರ ಜೀವನ ಮಂದಿರ
ಅದುರಿ ಮುದುರಿ ಕುಪ್ಪರಿಸುತಿದೆ;
ನಾಡಿಯು ಸತ್ತಿಹ ನೆತ್ತರು ಬತ್ತಿಹ
ತೊಗಲುದೇಹವಪ್ಪಳಿಸುತಿದೆ.

ತೊಳಲಾಟ

ತಾಳದೆ ಬಾಳದೆ ಬೀಳದೆ ಏಳದೆ
ತೆಕ್ಕಿ ಮುಕ್ಕಿ ಹೊರಳಾಡುತಿದೆ;
ಕಂಡೂ ಕಾಣದೆ, ಕಂಡರು ಕೇಳದೆ
ಬಿಕ್ಕಿ ಬಿಕ್ಕಿ ತೊಳಲಾಡುತಿದೆ.

ಪ್ರಾಣದ ಸಂಕಟ

ಚೀರಲು ಹಲುಬಲು ಬೊಬ್ಬೆಯ ಹೊಡೆಯಲು
ಕರುಳ ಸುರುಳಿ ಹೊಡಮರಳುತಿದೆ;
ಅಕ್ಕಟಕ್ಕಟಾ ! ಪ್ರಾಣದ ಸಂಕಟ
ಧಿಂಕಿಟ ಧುಮುಧುಮುಗುಟ್ಟುತಿದೆ

ಕನಸಿನಲ್ಲಿ

ನನ್ನೆದೆಯ ಗೂಡಿನೊಳಗಾವುದೋ ಹಕ್ಕಿಯುಲಿ
ಚಿಲಿಪಿಲಿಸುತಿಹುದಾವ ನಿಮಿಷದಲ್ಲು;
ಜಗದ ಮೊರೆ-ಕರೆಗಳಿಗೆ ಚಲುವು ಚಿನ್ನಾಟಕ್ಕೆ
ದನಿಗೂಡಿ ಹಾಡುತಿದೆ ಕನಸಿನಲ್ಲು !

ಮರೆಗೆ ನಿಂದು

ಹಾಡ ಸವಿ ಸೊಲ್ಲಿನಲೆ ತೋಡುತಿದೆ ಮತ್ತೊಂದು
ನೋವು ನರಳಾಟಗಳ ವಿಷಮ ಬಿಂದು;
ಮಣ್ಣ ಕಣಕಣದಲ್ಲಿ ಮರದ ಹನಿಹನಿಯಲ್ಲಿ
ಹುಡುಕುತಿಹುದಾವುದನೊ ಮರೆಗೆ ನಿಂದು.

ಒಳದನಿ

ಎದೆಗುದಿಯೊ, ಹದಗೆಟ್ಟ ಮುದಗೆಟ್ಟ ದನಿಯೊ
ಒಲವಿನಲೆಯಲೆಯಿಂದ ತೂರ್ವ ಸಿರ್ಪನಿಯೊ
ಹಲವಾರು ಕೊರತೆ-ಕೊರಕಲಿನ ಸೀಳ್ದನಿಯೊ
ಒಳದನಿಯೆ ಇವಕೆಲ್ಲ ಉಸಿರಾದುದೇನೊ.

ಮಾರ್ಪಡಬೇಕೆ ?

ಮುಗುಳು ನಗೆಗಾಗಿ
        ಕಂಬನಿಗಳನ್ನು ಹರಿಸಬೇಕೆ?.
ಭಾವನಾತ್ಮಕತೆ ಉಳಿಸಿಕೊಳ್ಳಲು
        ಕಲ್ಲಾಗಿ ಮಾರ್ಪಡಬೇಕೆ?.

ಬೇಡಿಕೊಳ್ಳಬೇಕೆ ?

ಹೆರಿಗೆ ಸುಲಭವಾಗಿದ್ದರೂ
        ಸಿಝೇರಿಯನ್ ಮಾಡಿಸಿಕೊಳ್ಳಬೇಕೆ?.
ಗೌರವ ಸಂಭಾವನೆಗೂ
        ಸೆರಗೊಡ್ಡಿ ಬೇಡಿಕೊಳ್ಳಬೇಕೆ?.

ಕಾಕಾ ಎನ್ನಬೇಕೆ ?

ಸ್ಪಷ್ಟತೆಗಾಗಿ
ನೂರೆಂಟು ಗೊಂದಲಕ್ಕೀಡಾಗಬೇಕೆ?.
ಕಾವ್ಯಕ್ಕಾಗಿ ಕೋಗಿಲೆಯನ್ನು ಬಂಧಿಸಿ
'ಕಾ' 'ಕಾ' ಎನ್ನಬೇಕೆ?.

ಒಂದು-ಹಲವು

ಎಷ್ಟು ಹಣತೆಗಳಿಂದ ಕತ್ತಲೆಯು ಕರಗುವದು ?
ಎಷ್ಟು ಕವಿತೆಗೆ ಜಗದ ಕಣ್ಣು ತೆರೆಯುವುದು ?-
ಒಂದಿದ್ದರೂ ಸಾಕು, ಮನೆಗೆ ಬೆಳಕಾಗುವುದು,
ಒಂದು ಕವಿತೆಗೆ ಕೂಡ ಮನ ಕರಗಬಹುದು.

ಸವಿನೆನಪು

ಹಲವು ಬಣ್ಣದ ಕಣ್ಣು ಸೆಳೆಯುವ ಗುಲಾಬಿಗಳು:
ಸುಂದರ ಪ್ರದರ್ಶನಕೆ ಕಸಿಗೊಂಡ ಒನಪು;
ಚೆಂಗುಲಾಬಿಯ ಕಂಪು, ಕೋಮಲತೆ ನಯವೊಂದೆ
ಕಣ್ಣು, ಮನಸಿಗೆ ತಣ್ಣಗೊಂದು ಸವಿನೆನಪು.

ಕ್ಷಿತಿಜ ಮೇರೆ

ಆಕಾಶದಲ್ಲಿ ಹಲವು ಚಿಕ್ಕಿ ಚೆಲ್ಲಾಪಿಲ್ಲಿ–
ಬಿದಿಗೆ ಚಂದ್ರನ ಬದಿಗೆ ಒಂದೆ ಕಿರು ತಾರೆ.
ಉದಯಾಸ್ತಗಳ ಹೊನ್ನಬೆಳಕು ಚಿಮ್ಮುವ ತವಕ–
ತುಂಬಿ ತುಳುಕದ ಹಾಗೆ ಈ ಕ್ಷಿತಿಜ ಮೇರೆ.

'ಕ್ರೋಧನ'ಕ್ಕೆ ಬೀಳ್ಕೊಡುಗೆ

ಟೊಂಗೆಗಳನತ್ತಿತ್ತ ಕಡಿದು, ಬೊಡ್ಡೆಗಲ್ಲಲ್ಲಿ ಕಚ್ಚು
ಹಾಕಿದರು, ಮತ್ತೆ ಚಿಗುರಿದ ಮರ-
'ಕ್ರೋಧನವೆ' ಸಾವಧಾನದಿ ನಿನ್ನ ಬೀಳ್ಕೊಡುವೆ,
'ಕ್ಷಯ'ಕೆ ಮದ್ದುಂಟು; 'ಪ್ರಭವ'ಕ್ಕೆ ಕಣ್ಣು ತೆರೆವೆ.

ಕಣ್ಣತೆರೆವೆ

ಸೃಷ್ಟಿ-ಸ್ಥಿತಿ-ಲಯದ ಎಡೆಬಿಡದ ಗೂಢ ವಿನ್ಯಾಸದಲಿ
ಆ ಮಾವು- ಈ ಬೇವು, ನಡುವೆ 'ಕೂಹು ಕೂಹು'-
ಹೂಹೂವಿನೊಳಗೆ ಕೆರಳಿ, ನರಳಿ, ಅರಳಿದ ನೋವು-
ಬಿಸಿಲು ಬಲಿಯುವ ಮೊದಲೆ ಬಲಗೊಂಡ ಕಾವು.

ಸಣ್ಣ ರಂಧ್ರ

ಉರಿವ ಸೂರ್ಯನ ಕಾರ್ಯವೈಖರಿಗೆ ತಣ್ಣಗಾದನು
ಚಂದ್ರ ; ಪೃಥ್ವಿಯ ಪರಿಭ್ರಮಣ ತಾರ-ಮಂದ್ರ ;
ತುಂಬಿ ತುಳುಕಿತೆನುವ ಕನಸು ಬೀಳುವ ಮೊದಲೆ
ತಳದಲ್ಲಿ ವಾಸ್ತವದ ಸಣ್ಣ ರಂಧ್ರ.

ಮುಂದೆ ಹೆಜ್ಜೆಯಿಲ್ಲ

ಇಪ್ಪತ್ತೊಂದನೇ ಶತಮಾನಕ್ಕೆ ಜಿಗಿದು ಹಾರುವ ಮಲ್ಲ
ಹದಿನಾಲ್ಕು ವರ್ಷ ವನವಾಸ ಹೇಗೆ ಕಾಣುತ್ತಿಲ್ಲ ?
ಗಾಯ ಮಾಯದೆ, ಹಿಡಿದ ಸೇಡಿನ ಕೊಳ್ಳಿ ನಂದಿಸದೆ
ಇಡಿಯಾಗಿ ನಾಡು ಸ್ಪಂದಿಸದೆ ಮುಂದೆ ಹೆಜ್ಜೆಯಿಲ್ಲ.

ಒಬ್ಬಂಟಿಯಾಗಿ

ಅವರೆದೆಯ ಡವಗುಟ್ಟುವಿಕೆ ನಮ್ಮ ಕಿವಿಗಪ್ಪಳಿಸಿ.
ಗಟ್ಟಿ ಬೆಸೆದಾಗ ಹೃದಯಕ್ಕೆ ಹೃದಯ ಕರಗಿ:
ದೈವರೇಖೆಗಳು ಒಂದರೊಡನೊಂದು ಹೆಣೆದಿರುವಾಗ
ನಡೆಯಲಾರೆವು ನಾವು ಒಬ್ಬಂಟಿಯಾಗಿ.

ಪ್ರಶ್ನೆ

ಮುಷ್ಟಿಯಲಿ ಜೀವ ಬಿಗಿ ಹಿಡಿದು ಮಲಗಿದೆ ಮಗುವು–
ಏಕೆ ಈ ಪರಿ ಕೆಂಪು ಕಣ್ಣ ತುಂಬ ?
ಯಾವ ಜೀವದ ರಕ್ತ ಬಸಿದು ಬಾನಂಚಿನಲಿ
ಹೆಪ್ಪುಗಟ್ಟಿತು ಹೀಗೆ ಸೂರ್ಯ ಬಿಂಬ ?

ಚಿಂದಿ ಬಟ್ಟೆ

ಎಷ್ಟೊಂದು ಹಗಲು ಬರಿ ಹೆಗಲುಗೊಟ್ಟವೊ ನಿನಗೆ–
ಹುಗಿದು ಹೋದವೊ ಚಿಕ್ಕೆ ಮಿನುಗದಂತೆ !
ಕರುಳೆಂಬುದೊಂದು ಒಳಗೆಲ್ಲಿಯಾದರು ಇಹುದೆ ?
ಮುಗಿಲೇಕೆ ಆಗಿಹುದು ಚಿಂದಿ ಬಟ್ಟೆ ?

ಕರುಣೆ–ಕಣ್ಣೆವೆ

ಗಾಳಿಯಲಿ ಹಾರಿಹುದು ಕಪ್ಪು ಮಸಣದ ಬೂದಿ
ಹೋಳಿಯಾದವು ಎಲ್ಲ ಹುಣ್ಣಿಮೆಗಳು;
ಧೂಳಿಪಟವಾಗಿಹುದು ಬುದ್ಧಿ, ಭೂಮ್ಯಾಕಾಶ–
ತೆರೆಯದಾಗಿದೆ ಕರುಣೆ–ಕಣ್ಣೆವೆಗಳು.

ಹೆಜ್ಜೆಯಿಡುವೆ

ಮುಖವಾಡವಿರದಂಥ ಮುಖವನರಸುತ್ತಿರುವೆ-
ಅದರ ಸಮ್ಮುಖದಲ್ಲಿ ದುಃಖ ಸುಖವೆ ;
ಚೈತ್ರ, ವೈಶಾಖಗಳ ಮೈತ್ರಿಯಲಿ ಚಿಗುರೊಡೆದು
ವರುಷದುದ್ದಕು ಹೀಗೆ ಹೆಜ್ಜೆಯಿಡುವೆ.

ಯುಗಾದಿ

ಆ ಹಾದಿ, ಈ ಹಾದಿ ಹುಡುಕಿ ಬೇಸತ್ತಾಗ
ಯಾವ ಮಾಯದಿ ಬಂದೆ ಓ ಯುಗಾದಿ ?
ಊದುವ ಸನಾದಿಯಲಿ ಉತ್ಸವದ ದನಿಯಿಹುದು
ನಂಬಲೆ, ಮಂಗಲಕೆ ಇದು ಬುನಾದಿ ?

ಮಾನ-ದಂಡ

ಪೃಥಿವಿಯನಳೆಯುವ ಮಾನದಂಡದಲಿ
ನಮ್ಮವಮಾನವು ಸೇರಿಹುದು;
ಗಂಗೆ, ಯಮುನೆ, ಓ ಬ್ರಹ್ಮಪುತ್ರೆಯರೆ
ಜಗದ ಮಾಳಿಗೆಯು ಸೋರಿಹುದು.

ಬೇಕು

ತೇಗಬೇಕು ಸಂತೃಪ್ತಿಗೊಂಡು
ಆತಿಥ್ಯ ಪಡೆದಮೇಲೆ,
ರಾಗ ಬೇಕು ಆಲಾಪದೊಡನೆ
ಸಂಗೀತವೆಂದಮೇಲೆ.

ಗುಲ್‌ಮೊಹರ್

ಮೇ ತಿಂಗಳ ಉರಿಬಿಸಿಲಿನ ಕೆಂಡವ
ಕೆದರಿದೆ ಗಾಳಿಯು ಎಂಬ ತೆರ
ದಾರಿಯ ಎಡಕೂ ಬಲಕೂ ಕೆಂಪಗೆ
ಹೂವನು ಹರಡಿವೆ ಗುಲ್‌ಮೊಹರ

ಆಯುಷ್ಯವರ್ಧಿನಿ

ಮೂಡುವ ಮುಳುಗುವ ಸೂರ್ಯನ ಜೊತೆಯಲಿ
ಓಡುವದೆಂಬರು ಆಯುಸ್ಸು-
ತಡಮಾಡುವ ಈ ರೈಲಿಗೆ, ಬಸ್ಸಿಗೆ
ಇದರಲಿ ನಿಜಕೂ ಶ್ರೇಯಸ್ಸು.

ಹುಣ್ಣಿಮೆ

ಹುಣ್ಣಿಮೆ ಇಟ್ಟಿತಗೋ ಬಾನಂಚಿಗೆ ಬಂಗಾರದ ತತ್ತಿ
ಮಿಸುಕಾಡಿತು ನಸು, ತುಸುವೇ ಇಣುಕಿತು ಬೆಳ್ಳಿಯ ನಡುನೆತ್ತಿ
ದುಂಡಾಯಿತು ಹೊರಬಂದಿತು ವ್ಯೋಮದ ಕಾಮದ ಬೆಳಕಿನ ಪಿಂಡ
ಶೂನ್ಯವನೆಲ್ಲಾ ತುಂಬಿತು ತುಳುಕಿತು; ಜಗವೋ ಹಾಲಿನ ಹೊಂಡ.

ದೂರದರ್ಶನ

ಸಂಜೆ, ಇನ್ನೂ ಮಾರು ಹೊತ್ತಿರುವಾಗ
ಹೊರಗೆ ಅಂಗಳದಲ್ಲಿ ಕುಳಿತು,
ಯಕ್ಷಗಾನದ ಕಿರೀಟದಂತೆ ಥಳ ಥಳ ಹೊಳೆಯುತ್ತ
ಸದ್ದಿಲ್ಲದೆ ಬುಗುರಿಯಂತೆ ತಿರು ತಿರುಗಿ
ಪರದೆಯ ಹಿಂದೆ ಮೆಲ್ಲನೆ ಸರಿಯುವ
ಸೂರ್ಯನನ್ನು ನೋಡಬೇಕೆಂದಿದ್ದೆ-
ಹಾಳು ಟ.ವಿ. ಯ ಮುಂದೆ ಕುಳಿತು ಮರೆತುಬಿಟ್ಟೆ.

ಕವಿತೆಯ ಪಾಡು

ಯಾವುದೊ ಪತ್ರಿಕೆಯಲ್ಲಿ
ಉತ್ತಮ ಕವಿತೆಯೊಂದು ಅಕಸ್ಮಾತ್ ಸಿಕ್ಕಾಗ
ನಿಧಿ ಕಂಡವನಂತೆ ಸಂತೋಷಗೊಂಡು
ಕೊಂಡು ತಂದೆ.
ಓದಲು ಒಯ್ದ ನೆರೆಮನೆಯವರು
ಅಡಿಗೆ ಮನೆಯಲಿ ಅದನ್ನು
ಇನ್ನೂ ಹುಡುಕುತ್ತಿದ್ದಾರೆ.

ಯುದ್ಧ

ಮೊನ್ನೆ ಯುದ್ಧದ ಸಂದರ್ಭದಲ್ಲಿ
'ಕೊಲ್ಲಿಯುದ್ದ' 'ಕೊಲ್ಲಿ ಕೊಲ್ಲಿ' ಎಂದು
ಪೇಪರಿನ ಹುಡುಗ ಕೂಗುತ್ತಿದ್ದಾಗ,
'ಕೊಲಬೇಡ, ಬೇಡ, ಬೇಡಾ' ಎಂದು
ಎಣ್ಣೆ ಮುಳುಗಿದ ಕಡಲಹಕ್ಕಿಯ ಕೊರಳಲ್ಲಿ
'ಅಣ್ಣ' ಮೊರೆಯಿಡುತ್ತಿದ್ದ.

ನಿಸರ್ಗ–ನಾಗರಿಕತೆ

ಮೊನ್ನೆ ಬಿದ್ದ ಭಾರಿ ಮಳೆ–ಗಾಳಿಯಲ್ಲಿ
ಥೈ ಥೈ ಕುಣಿದು
ಬಟ್ಟೆಯನೆಲ್ಲ ಕಳಚಿ,ಕೂದಲು ಬಿಚ್ಚಿ
ಮೈ, ಕೈ ತಿಕ್ಕಿಕೊಂಡು ಚೆಲ್ಲಾಟವಾಡಿ
ಯಥೇಚ್ಛ ಜಳಕ ಮಾಡಿದ ಗಿಡಮರಗಳೇ,
ನನ್ನ ಮನೆಯ ನಲ್ಲಿಯಲ್ಲಿ
ನೀರೇ ಬರಲಿಲ್ಲ.

ಹುಣ್ಣಿವೆ

ಹುಣ್ಣಿವೆಯ ದಿನ ಇಡಿ ರಾತ್ರಿ
ಬೆಳುದಿಂಗಳನ್ನು ಕುಡಿದು ತೂರಾಡಿದ
ಗಿಡ, ಬಳ್ಳಿ, ಮರಗಳೇ–
ಬಿಳಿ ಶಾಲು ಹೊತ್ತು, ಆಕಾಶದಲ್ಲಿ
ವಾಕಿಂಗ್ ಮಾಡಿದ ಮೋಡಗಳೇ,
ನನಗೆ ನಿದ್ದೆ ಬಂದುಬಿಟ್ಟಿತು,–
ಎದ್ದು ನೋಡಿದಾಗ
ಪಶ್ಚಿಮದಲ್ಲಿ ಚಂದ್ರ ಬೋರಲಾಗಿದ್ದ.

ಜೈಲುವಾಸ

ಆರುತಿಂಗಳ ಜೈಲುವಾಸದ ಖೊಟ್ಟಿ
ಸರ್ಟಿಫಿಕೇಟಿನಿಂದ
ಪಿಂಚಣಿ ಪಡೆಯುತ್ತಿರುವ ಶೆಟ್ಟಿ-
ಸ್ವಾತಂತ್ರ್ಯ ಯೋಧ;
ಇಪ್ಪತ್ತೈದು ವರುಷಗಳಿಂದ ಸೆರೆಮನೆಯಲ್ಲಿರುವ
ನೆಲ್ಸನ್ ಮಂಡೇಲಾ ಬಿಡುಗಡೆಯಾದಲ್ಲಿ
ಎಷ್ಟು ಪಿಂಚಣಿ ಪಡೆಯಬಹುದು-
ಎಂದು ಲೆಕ್ಕ ಹಾಕತೊಡಗಿದ.

ಮೂಲವಸ್ತು

ಬೇವಿಗೂ ಹೂವುಂಟಲ್ಲ-
ಅದರೊಡನೆ ಬೆಲ್ಲ, ಪುಟಾಣಿ, ಕೊಬ್ಬರಿ
ಕೂಡಿಸಿ, ಕಹಿ ಕಡಿಮೆ ಮಾಡಿಕೊಂಡು
ತಿನ್ನುತ್ತೇವೆ: ಸಂವತ್ಸರದ ಪ್ರಾರಂಭಕ್ಕೆ.
ಕೊನೆಗೆ ಅನ್ನುತ್ತೇವೆ:
ಮೂಲ ವಸ್ತು ಬೇವು, ಜೊತೆಗೆ ಕೊಂಡು
ತಂದದ್ದು ಬೆಲ್ಲ-
ದುಃಖ ಸುಖದ ಕ್ರಮವೂ ಹೀಗೆಯೊ ಏನೋ
ಯಾವ ಬಲ್ಲ.

ಬೇವಿನ ಮರ

ಬೇಸಗೆಯಲ್ಲಿ ಬೇವಿನ ಮರದ ಕೆಳಗೆ
ಬೇರೆಲ್ಲಿಯೂ ದೊರೆಯದ ತಂಪು–
ಕಹಿಯ ಕಲ್ಪನೆಯೇ ಬಾರದ
ಹೂವಿನ ಗಮಗಮ ಕಂಪು.
ಎಲೆಗಳ ಚಿತ್ತಾರದ ಹಸುರು ಹಚ್ಚೆಯ ಹಿಂದೆ
ನೀಲಾಕಾಶದ ಬರಿ ಮೈಯೊಂದೆ.
ಸುಳಿಗಾಳಿ ಪಿಸುಗುಡುತ್ತಿದೆ–'ಬಂದೆ, ಬಂದೆ'.
ಇಂಥ ನೆಮ್ಮದಿಯ ಹೊತ್ತಿನಲ್ಲಿ
ನಿಮ್ಮ ಕಣ್ಣು ತಂತಾನೇ ಮುಚ್ಚಿಕೊಳ್ಳುತ್ತಿರುವಾಗ
ಲೊಟ್ ಎಂದು ಮೈಮೇಲೆ ಬೀಳುತ್ತದೆ;
ಮೇಲೆ ನೋಡಿದರೆ
ಹಾಯಾಗಿ ರೆಕ್ಕೆ ಬಿಚ್ಚಿದ ಕಾಗೆ.

ಅವಲೋಕನ

ಎಷ್ಟು ಬೇಗ ಬೇಗ ಓಡುತ್ತವೆ ದಿವಸಗಳು,
ಕಣ್ಮುಚ್ಚಿ ತೆರೆಯುವಷ್ಟರಲ್ಲಿಯೇ ಮುಳುಗುತ್ತವೆ ತಿಂಗಳು.
ನೋಡ ನೋಡುತ್ತಲೇ ಕ್ಯಾಲೆಂಡರು ಮುಗಿದು
ಉರುಳುತ್ತದೆ ಇಡೀ ವರುಷ: ಜಾರುವ ಮರಳು,
ಇರುಳು ಚಾಪೆ ಹಾಸುತ್ತಲೇ ಬರುತ್ತದೆ,
ಹಗಲು ಸುತ್ತಿ ಸುರುಳಿ ಮಾಡುತ್ತಲೇ ಇರುತ್ತದೆ.
ನಿದ್ದೆಯಲ್ಲೂ ಅರ್ಧಕ್ಕರ್ಧ ಕನಸು–
ಎಲ್ಲ ಮರೆತು ಹೋಗುತ್ತದೆ.

ಆಟಿಗೆ

ಪೇಟೆಯಿಂದ ತಂದ ಬಗೆ ಬಗೆಯ ಆಟಿಗೆಗಳನ್ನು
'ನನಗೆ' 'ತನಗೆ' ಎಂದು ತೆಗೆದುಕೊಂಡು
ಮಕ್ಕಳು ಸಂತೋಷಗೊಂಡು
ಆಡಿ ಆಡಿ ಸಾಕಾದ ಮೇಲೆ
ತಾವೇ ತೆಗೆದಿಟ್ಟುಕೊಂಡವು.
ಸೊಗಸಾಗಿ ಪ್ಯಾಕು ಮಾಡಿದ
ರಟ್ಟಿನ ಖಾಲಿ ಪೆಟ್ಟಿಗೆಗಳನ್ನು
ಅಷ್ಟೇ ಜೋಪಾನವಾಗಿ
ನಾನು ತೆಗೆದಿಟ್ಟುಕೊಂಡೆ.

ಹೊಸಹುಟ್ಟು

ನಿದ್ದೆಮಡಿಲೊಳು ದಣಿದು ಮಲಗಿಹುದು
ಜಗದ ಬಾಳು ;
ಹಗಲಿನ ಅಪಸ್ವರಗಳೆಲ್ಲ ಮೌನದಲಿ
ಮರೆತಿಹವು ನೂರಾರು ಮೇಲು–ಕೀಳು:
ನಿದ್ದೆ ಬಾರದೆ ನಿನಗೆ? ಬೀಳದೆಯೆ ಸವಿಗನಸು?
ನೆಲದಿಂದ ಮುಗಿಲವರೆಗೂ ಚಿಮ್ಮಿ ಬರುತಿಹವೆ ಬಾಣ
ಬಿರುಸು?
ಕತ್ತಲೆಯ ಆಳದಲಿ
ಕೊರತೆಗಳನೆಲ್ಲವನು ಹೂಳು ಹೂಳು.

ಬಾಪು-ಛಾಪು

1

“ನಿಮಗೇಕೆ ಮೂರನೇ ದರ್ಜೆಯ ಪ್ರಯಾಣ?”
“ನಾಲ್ಕನೆಯದಿಲ್ಲಲ್ಲ, ಏನು ಮಾಡೋಣ ?”

2

(ಕಲಾವಿದನಿತ್ತ ತಮ್ಮ ಭಾವಚಿತ್ರ ನೋಡಿ)
“ನನ್ನ ಕಿವಿಗಳು ಏಕೆ ಇಷ್ಟುದ್ದವಾಗಿವೆ?”
“ನಿಮ್ಮ ಕಿವಿ ಇರುವುದೇ ಹಾಗಲ್ಲವೆ?”
“ನಾನೇನು ಬಲ್ಲೆ, ಕನ್ನಡಿಯ ನೋಡಿದ್ದರಲ್ಲವೆ?”

3

“ನಿಮಗೆ ಕೋಪ ಬರುವುದೆ ಬಾಪು?”
“ನನ್ನ ಹೆಂಡತಿಯನ್ನು ಕೇಳಿ: ಅದರ ತಾರೀಫು”
“ನನ್ನ ಪತಿ ಮಾತ್ರ ಎಂದಿಗೂ ಸಿಟ್ಟಾದುದಿಲ್ಲ, ನಿಜಕು”
“ಹಾಗೊ? ಅವರಿಂದ ಸಾಕಷ್ಟು ಲಂಚ ಪಡೆದಿರಬೇಕು.”

4

“ಅರ್ಜುನನ ಚಿಕ್ಕ ಪ್ರಶ್ನೆಗೆ ಕೃಷ್ಣನುತ್ತರ ಒಂದು ಅಧ್ಯಾಯ.
ಮಾತು ಮಾತಿಗೆ ‘ಗೀತೆ’ ಉದ್ಧರಿಸುವಿರಿ ಬಾಪು
ನಿಮ್ಮ ಉತ್ತರವೇಕೆ ಒಂದೆ ವಾಕ್ಯದಲಿ ಮುಕ್ತಾಯ?”
“ಕೃಷ್ಣನಿಗೆ ಪ್ರಶ್ನೆ ಕೇಳಿದವನೊಬ್ಬನೇ ಅರ್ಜುನ
ನನಗೊ? ಅರ್ಜುನರು ನೂರು, ಸಾವಿರ ಜನ.”

5

"ಸತ್ತಮೇಲೆ ಸ್ವರ್ಗಕ್ಕೆ ಹೋಗುವ ನಂಬಿಕೆಯುಂಟೆ ನಿಮಗೆ?"
"ಸ್ವರ್ಗಕ್ಕೊ, ನರಕಕ್ಕೊ ಗೊತ್ತಿಲ್ಲ,
ಆದರೆ ಎಲ್ಲಿ ಹೋದರೂ
ಬೆನ್ನು ಹತ್ತುವನು ನಿಮ್ಮಂಥ ಪತ್ರಕರ್ತ".

6

"ಇಗೋ, ಇವರೇ ಬಾಪು, ಚೆನ್ನಾಗಿ ನೋಡು ಮಗು"
–ಹಿಗ್ಗಿನಲಿ ಹೇಳಿದಳು ತಾಯಿ.
"ಇವರೆ? ಏನೇನೂ ಚಂದವಿಲ್ಲಮ್ಮ"
–ತಾಯಿ ಮುಚ್ಚಿದಳದರ ಬಾಯಿ.
" ಬೆದರಿಸಬೇಡ, ಮಗು ನಿಜವನ್ನೇ ಹೇಳಿದೆ"
–ಬಾಪು ನಕ್ಕರು ತೆರೆದು ಬೊಚ್ಚುಬಾಯಿ.

7

"ಸುಳ್ಳನಾಡಲು ಬೇಡಿ ಎಂದು ಹೇಳಿಯೇ ಹೇಳುವಿರಿ
ಇರುವನೇ ಅಂಥ ವ್ಯಕ್ತಿ ಈ ಪ್ರಪಂಚದಲ್ಲಿ?"
"ಪ್ರಪಂಚದ ಮಾತು ಬಿಡಿ, ಈ ಸಭೆಯಲ್ಲೆ ಇಹರು
ಎಂದೂ ಸಟೆಯನಾಡದೆ ಇರುವ ಪುಣ್ಯಶಾಲಿಗಳು".
"ಯಾರವರು? ದಯವಿಟ್ಟು ತೋರಿಸಿ ನಮಗೂ"
ಅಲ್ಲಿಯೇ ನಲಿದಾಡುತ್ತಿದ್ದ ಚಿಕ್ಕ ಮಕ್ಕಳ ತೋರಿ
ನಕ್ಕುಬಿಟ್ಟರು ಬಾಪು ಮಕ್ಕಳಂತೆ.

8

ಗಾಂಧೀಜಿಯನು ಭೇಟಿ ಮಾಡಲು ಮೊದಲ ಸಲ
ಬಂದಿದ್ದನೊಬ್ಬ ಮುಗ್ಧ ಮಾರವಾಡಿ–
ನೋಡಿದನು: ಅವರ ತಲೆಯ ಮೇಲಿರಲಿಲ್ಲ 'ಗಾಂಧಿಟೋಪಿ'.
ಅಚ್ಚರಿಗೊಂಡು ಕಾರಣವ ಕೇಳಲು ಆತ
ಹೀಗೆ ನಡೆಯಿತು ಅವರ ಪ್ರಶ್ನೋತ್ತರ:
"ನೀವು ಸುತ್ತಿರುವ ಪಗಡಿಗೆ ಎಷ್ಟು ಗಜ ಬಟ್ಟೆ?"
"ಹತ್ತು ಗಜ ಬೇಕಾಗಬಹುದು ಅಷ್ಟೆ."
"ಇಷ್ಟರಲಿ ಇಪ್ಪತ್ತು ಜನರಿಗೆ ಹೊಲಿಸಬಹುದಲ್ಲ ಟೋಪಿ
ಅದನೆಲ್ಲ ನೀವೊಬ್ಬರೇ ಬಳಸಿದಿರಿ ಸೇಠ್‌ಜಿ.
ಇನ್ನುಳಿದ ಹತ್ತೊಂಬತ್ತು ಜನ ಬರಿತಲೆಯಿಂದ
ಇರಬೇಕಾಗಿ ಬಂತಲ್ಲ–
ಅದರಲ್ಲಿ ನಾನೂ ಒಬ್ಬ, ತಿಳಿಯಿತಲ್ಲ?"

9

ಗಾಂಧೀಜಿ ಧರಿಸುತ್ತಿದ್ದರು ಮೊದಲು ಗಾಂಧಿಟೋಪಿ.
        ಸಮಾರಂಭದಲೊಮ್ಮೆ ಬಂದರೊಬ್ಬರು ಒಳಗೆ,
ಅವರ ಕಂಡೊಡನೆ ತಮ್ಮ ತಲೆಯ ಮೇಲಿನ ಟೋಪಿ
        ತೆಗೆದು ಇಟ್ಟುಬಿಟ್ಟರು ಕೆಳಗೆ.
ಅಧ್ಯಕ್ಷರಚ್ಚರಿಪಟ್ಟು ಕೇಳಿದರು: "ಯಾಕೆ ಹೀಗೆ?"
        ಗಾಂಧೀಜಿ ಹೇಳಿದರು ಅವರೊಬ್ಬರಿಗೆ ಕೇಳಿಸುವ ಹಾಗೆ:
"ಭ್ರಷ್ಟ ರಾಜಕಾರಣಿಯೊಬ್ಬ ಗಾಂಧಿ ಟೊಪ್ಪಿಗೆ ಧರಿಸಿ
        ಕೈಬೀಸಿ ಬರುವುದ ಕಂಡೆ ಈಗ ತಾನೆ;
ಇದಕಿಲ್ಲ ಇನ್ನು ಸ್ಥಾನ ನನ್ನ ತಲೆಯ ಮೇಲೆ."

ರವೀಂದ್ರರ ನುಡಿಮುತ್ತುಗಳು
(‘ಸ್ಟ್ರೇ ಬರ್ಡ್ಸ್’ದಿಂದ ಆಯ್ಕೆ)

1

ಬೇಸಗೆಯಲ್ಲಿ ಅಲೆದಾಡುವ ಹಕ್ಕಿಗಳು
ನನ್ನ ಕಿಟಕಿಯ ಬಳಿ ಕುಳಿತು
ಹಾಡಿ ಹಾರಿ, ಹೋಗುತ್ತವೆ.
ಹೇಮಂತದ ಹಣ್ಣೆಲೆಗಳು
ಹಾಡಲರಿಯದೆ ಗಾಳಿಗೆ ತೇಲುತ್ತ
ಕಿಟಕಿಯ ಬಳಿ ನಿಟ್ಟುಸಿರಿನೊಂದಿಗೆ
ಕೆಳಗುರುಳುತ್ತವೆ.

2

ಹೂವಿನಲ್ಲಿ
ನೆಲದ ಕಂಬನಿಗಳು
ತಮ್ಮ ನಗೆಯನ್ನರಳಿಸುತ್ತವೆ.

3

“ಸಮುದ್ರ ,ಯಾವುದು ನಿನ್ನ ಭಾಷೆ ?”
“ಚಿರಂತನ ಪ್ರಶ್ನೆ”.
“ನಿನ್ನ ಭಾಷೆ ಓ ಆಗಸವೆ ?”
“ಚಿರಂತನ ಮೌನ”.

4

ಹಕ್ಕಿ ಅಂದುಕೊಳ್ಳುತ್ತದೆ
"ನಾನು ಮೋಡವಾಗ ಬೇಕಿತ್ತು."
ಮೋಡಕ್ಕೆ ಅನಿಸುತ್ತದೆ
" ನಾನೊಂದು ಹಕ್ಕಿಯಾಗಬೇಕಿತ್ತು".

5

ನಿನ್ನೆಯ ಇರುಳಿನ ಬಿರುಗಾಳಿ
ಇಂದಿನ ಮುಂಜಾವಿಗೆ
ಶಾಂತಿಯ ಬಂಗಾರದ ಕಿರೀಟ
ತೊಡಿಸಿದೆ.

6

ಹಚ್ಚಿ ನೋಡಿ ಹಕ್ಕಿಗೆ
ಬಂಗಾರದ ರೆಕ್ಕೆ-
ಮುಂದೆ ಅದು ಹಾರಲಾರದೆಂದೂ
ಆಕಾಶಕ್ಕೆ.

7

ಪ್ರೀತಿಯಲ್ಲಿ ಕಂಡುಕೊ ನಿನ್ನನ್ನು
ಸೌಂದರ್ಯವೆ
ಕನ್ನಡಿಯ ಹೊಗಳಿಕೆಯಲ್ಲಲ್ಲ.

8

ಭೂಮಿಗೆ ಮುತ್ತನಿತ್ತು, ಕಿವಿಯಲ್ಲಿ ಹೇಳಿದವು
ಮಳೆ ಹನಿಗಳು :
"ನಾವು ಮನೆಗಾಗಿ ಕಾತರಿಸಿದ
ನಿನ್ನ ಮಕ್ಕಳು
ಸ್ವರ್ಗದಿಂದ ಮರಳಿ ಬಂದಿದ್ದೇವೆ
ಸೇರಲು ನಿನ್ನ ಮಡಿಲು."

9

ಬೇರುಗಳು
ಭೂಮಿಯಾಳದ ಟೊಂಗೆಗಳು.
ಟೊಂಗೆಗಳು
ಗಾಳಿಯಲ್ಲಿನ ಬೇರುಗಳು.

10

"ಸರಬರ ಸದ್ದು ಮಾಡುವ ನಾವು
ಬಿರುಗಾಳಿಗುತ್ತರಿಸುವ ಎಲೆಗಳು.
ಇಷ್ಟೊಂದು ಮೌನವಾಗಿದ್ದೀಯಲ್ಲ
ನೀನು ಯಾರು?"
"ನಾನೇ ? ನಾನು ಕೇವಲ ಹೂವು ".

11

ಮುಳುಗುತ್ತಿರುವ ಸೂರ್ಯ ಕೇಳಿದ:
" ಯಾರಿದ್ದಾರೆ ನನ್ನ ಕರ್ತವ್ಯ ನೆರವೇರಿಸಲು ?"
ನಮ್ರವಾಗಿ ನುಡಿಯಿತು ಮೂಲೆಯ ಹಣತೆಯೊಂದು:
" ನನ್ನೊಡೆಯಾ, ನನ್ನ ಕೈಲಾದಷ್ಟು
ನಾನು ಬೆಳಗಬಲ್ಲೆ."

ದಿನಕರ ದೇಸಾಯಿ ಅವರಿಂದ

ಕವನ ಕಾಣಿಕೆ

ಧಾರವಾಡದ ಕಣವಿ ಅಪ್ರತಿಮ ಕವಿಯು.
ಇವನ ಕವಿತೆಗಳಲ್ಲಿ ಸಕ್ಕರೆಯ ಸವಿಯು
ಇಂಥ ಸವಿ ನಮ್ಮ ಕನ್ನಡದಲ್ಲಿ ವಿರಳ .
ಈ ಸವಿಯ ಸವಿಸವಿದು ನಾನಾದೆ ಮರುಳ.

ಕಣವಿಯರ ಕವಿತೆಯೊಳಗುಂಟು ಲಾಲಿತ್ಯ
ಲಾಲಿತ್ಯದೊಂದಿಗೇ ಅರಳುತಿದೆ ಸತ್ಯ.
ಈ ತರದ ಕವಿತೆಗಳ ನಾ ರಚಿಸಲಾರೆ.
ಕಣವಿಯರ ಒಂದೊಂದು ಕವಿತೆಯೂ ತಾರೆ.

ನವ್ಯ ಲೇಹದ ಒಳಗೆ ಶುಂಠಿ ಪ್ರಾಚೀನ.
ಬೆರಸಲಿಕೆ ಶ್ರೀ ಕಣವಿಯರು ಬಹಳ ನಿಪುಣ.
ಇಂಥ ನಿಪುಣತೆ ಕಾವ್ಯ ಲೋಕದಲಿ ವಿರಳ
ವಿರಳವಿದ್ದಂತಯೇ ಅದು ಬಹಳ ಸರಳ.

ಚೆನ್ನವೀರನ ಕವಿತೆಗಿರುವ ರಸಪಾಕ.
ಬಹಳ ರುಚಿಕರವೆಂದು ಸಾರುತಿದೆ ಲೋಕ.
ಇಂಥ ರುಚಿಕರ ಪಾಕ ಲಭಿಸುವುದು ಕಷ್ಟ
ಸವಿದ ಪ್ರತಿಯೊಬ್ಬನೂ ಪೂರ್ಣ ಸಂತುಷ್ಟ.

ಕಣವಿಯರ ಬರವಣಿಗೆಯಲಿ ವಿಡಂಬನವು
ಚೆನ್ನಾಗಿ ಒಡಮೂಡಿ ಸುಖಿಸುವುದು ಮನವು.
ಇದರ ಖಾರದ ರುಚಿಗೆ ಮರುಳಾಗಿ ನಾನು.
ಖಾರವೇ ಬೇಕೆಂಬೆ, ಸಾಕೆಂಬೆ ಜೇನು.

ಚೆನ್ನವೀರನ ಕವಿತೆಗಳ ನೋಡಿ ನಾನು
ಚಂದ್ರನಿಗೆ ಮೊನ್ನೆ ಮಾಡಿದೆನು ಟೆಲಿಫೋನು
ಹೇಳಿದೆನು : ಚಂದಿರನೆ ನೀನಿರುವ ವರೆಗೆ
ಈ ಕವಿತೆಗಳು ಹಿಟ್ಟು ಚೆಲ್ಲುವವು ಧರೆಗೆ.

–ದಿನಕಾರದೇಸಾಯಿ
'ಚೆಂಬೆಳಕು' ಅಭಿನಂಧನ ಗ್ರಂಥದಿಂದ
೧೯೮೧

ಚೆಂಬೆಳಕಿನ ಕವಿ : ಚೆನ್ನವೀರ ಕಣವಿ

ಕನ್ನಡದಲ್ಲಿ ಸದಾ ಚೆಂಬೆಳಕು ಚೆಲ್ಲುತ್ತಿರುವ ಚೆನ್ನಪ್ಪ ವೀರಮಲ್ಲಪ್ಪ ಕಣವಿ ಧಾರವಾಡದ ವಿಕಸಿತ ಕುಸುಮ. ಧಾರವಾಡದ ಮನಸ್ಸು, ಅಲ್ಲಿಯದೇ ಸಂಸ್ಕೃತಿ.

ಧಾರವಾಡದ ಕಣವಿ ಅಪ್ರತಿಮ ಕವಿಯು
ಅವನ ಕವಿತೆಗಳಲ್ಲಿ ಸಕ್ಕರೆಯ ಸವಿಯು,
ಇಂಥ ಕವಿ ನಮ್ಮ ಕನ್ನಡದಲ್ಲಿ ವಿರಳ
ಈ ಸವಿಯ ಸವಿಸವಿದು ನಾನಾದೆ ಮರುಳ

ಹೀಗೆಂದು ಕನ್ನಡದ ಅಪ್ರತಿಮ ಚುಟುಕು ಕವಿ ದಿನಕರ ದೇಸಾಯಿಯವರಿಂದ ಹೊಗಳಿಸಿ ಕೊಳ್ಳಬೇಕಾದರೆ ಅದೇನು ಸಾಮಾನ್ಯವೆ?

ಸಜ್ಜನಿಕೆ, ಸಮನ್ವಯ, ಸರಳ ಸಹಜ ಚಿಂತನೆ, ಭಾವುಕತೆ – ಇಂಥ ಅನಿಸಿಕೆಗಳೇ ಇವರ ಸಹೃದಯರ ಮನಸ್ಸಿನಲ್ಲಿ ಮೂಡುವುದು ಸಹಜ.

ಇಂಥ ವ್ಯಕ್ತಿತ್ವದ ವಿಕಾಸಕ್ಕೆ ಕಣವಿಯವರು ಬೆಳೆದ ಪರಿಸರವೇ ಕಾರಣ, ಹುಟ್ಟೂರು ಧಾರವಾಡ ಜಿಲ್ಲೆಯ ಹೊಂಬಳ. ಜೂನ್, ೨೮–೧೯೨೮ ರಲ್ಲಿ ಜನನ. ತಂದೆ ಸಕ್ರೆಪ್ಪ, ತಾಯಿ ಪಾರ್ವತಮ್ಮ. ತಂದೆ ಶಾಲಾ ಮಾಸ್ತರ. ಅವರಿಗೆ ಅನುಭಾವ ಪದಗಳಲ್ಲಿ ಅಪಾರ ಆಸಕ್ತಿ. ಸದಾ ಮೆಲುದನಿಯಲ್ಲಿ ಅವುಗಳ ಗುಂಗಾನ. ಶರಣ ಪ್ರವೃತ್ತಿ. ತಾಯಿಯದು ಮುಗ್ಧ ಮನಸು. ಓದು ಬರಹ ಇರದಿದ್ದರೂ ಸುಸಂಸ್ಕೃತಿಯ ಕಣಜ. ಮನೆಗೆಲಸದಲ್ಲಿ ಅಚ್ಚುಕಟ್ಟು.

ಹಳ್ಳಿಯ ಪರಿಸರ, ಬೆವರು ಸುರಿಸಿ ದುಡಿಯುವ ಸರಳ ಜೀವಿಗಳ ಪ್ರಭಾವ. ಧಾರವಾಡಕ್ಕೆ ಬಂದಾಗಲೂ ಇಂಥ ಪರಿಸರದಿಂದ ಅವರೆಂದೂ ವಂಚಿತರಾಗಲಿಲ್ಲ. ಧಾರವಾಡ ನಗರ ಎನಿಸಿಕೊಂಡ ಒಂದು ದೊಡ್ಡ ಗ್ರಾಮ ಎಂಬಂಥದೇ ಅಲ್ಲಿಯ ವಾತಾವರಣ.

ಇಂದಿಗೂ ಧಾರವಾಡದಲ್ಲಿ ಪ್ರತಿಫಲಿಸುತ್ತಿರುವ ಚೆಂಬೆಳಕು ಚೆನ್ನವೀರ ಕಣವಿ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದಿ ಬಿ.ಎ ಪಡೆದ ಕಣವಿ ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ ಆಮೇಲೆ ಅದೇ ವಿಶ್ವವಿದ್ಯಾಲಯದ ಪ್ರಸಾರಾಂಗದ ಕಾರ್ಯದರ್ಶಿಯಾಗಿ, ಅದರ ನಿರ್ದೇಶಕರಾಗಿ ನಿವೃತ್ತಿ, ಧಾರವಾಡದ ಗಂಟು ನಂಟು ಕಣವಿಯವರಿಗೆ ಶಾಶ್ವತ.

ಆದರೆ ಇಡೀ ಕರ್ನಾಟಕದಲ್ಲಿ ಹಬ್ಬಿದ ಚೆಂಬೆಳಕು. ಇದರ ಮುನ್ಸೂಚನೆಯಾಗಿ ಎಂಬ ಹಾಗೆ ೧೯೪೭ರ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕ ಕಾಲೇಜಿನ ವಿಶಾಲವಾದ ಮೈದಾನದಲ್ಲಿ ಅವರು ಓದಿದ ಕವನ 'ಬಂಧದಿಂ ಬಿಡುಗಡೆಗೆ'. ಒಳಗೊಳಗೇ ಹರಿಯುತ್ತಿದ್ದ ಕವಿಯ ಕಾವ್ಯದ ಸೆಲೆ ಆಗ ಹೊರಗೆಲ್ಲ ಚೆಲ್ಲಾಡಿತು. ಆಗ ಅವರು ಇಂಟರ್ ವಿದ್ಯಾರ್ಥಿ. ಎಳೆಯ ಜೀವದ ಹುರುಪಿನ ವಾಣಿಯಿಂದ ಇಡೀ ಸಭೆಯೇ ಪುಳಕಿತವಾಯಿತು.

ಮುಂದೆ ಅವರು ಬರೆದದ್ದು, ಹಾಡಿದ್ದು ಎಲ್ಲವೂ ದೊರಕಿಸಿಕೊಡುತ್ತ ಬಂದಿರುವುದೆಂದರೆ ಅಂದಿನ ಧ್ವನಿಯ ಅನುರಣನ. ಅವರದು ಪರಿಮಿತವಿಲ್ಲದೆ ಧೃಡವಾಗಿ ಹರಿದು ಬಂದ ಕಾವ್ಯವಾಹಿನಿ. ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ಮಧುಚಂದ್ರ, ದೀಪಧಾರಿ, ಮಣ್ಣಿನ ಮೆರವಣಿಗೆ, ನೆಲ–ಮುಗಿಲು, ಎರಡು ದಡ, ನಗರದಲ್ಲಿ ನೆರಳು, ಜೀವಧ್ವನಿ, ಕಾರ್ತಿಕದ ಮೋಡ, ಜೀನಿಯಾ, ಶಿಶಿರದಲ್ಲಿ ಬಂದ ಸ್ನೇಹಿತ, ಹಕ್ಕೀ ಪುಚ್ಚ – ಇದು ಕಣವಿ ಕವನ ಸಂಕಲನಗಳ ಸಾಲುಹಣತೆ.

ಕೊನೆಯ ಸಂಕಲನ ಮಕ್ಕಳಿಗಾಗಿ. ಉಳಿದೆಲ್ಲ ಬೆಳೆದವರಿಗಾಗಿ. ಈ ಸಂಕಲನಗಳ ಹೆಸರುಗಳೇ ಸಾಕು – ಕಣವಿ ಕವಿತೆಗಳ ಸ್ವರೂಪ ಎಂಥದೆಂಬುದನ್ನು ತಿಳಿಯುವುದಕ್ಕೆ.

ಕಾವ್ಯದಲ್ಲಿ ಮಾಧುರ್ಯ, ಓಜಸ್ಸು, ಪ್ರಸಾದ ಇರಬೇಕು ಎನ್ನುವುದು ಕಾವ್ಯ ಮೀಮಾಂಸಕಾರರ ಮನೀಷೆ. ಚೆನ್ನವೀರರ ಕಾವ್ಯ ಮಾಧುರ್ಯದಲ್ಲಿ ಅದ್ದಿ ತೆಗೆದದ್ದು. ಓಜಸ್ಸು ಓತಪ್ರೋತ. ಪ್ರಸನ್ನತೆಯೇ ಅಂತಿಮ ಪರಿಣಾಮ.

ಚೆನ್ನವೀರ ಕಣವಿಯವರ ಬದುಕೇ ತೇಜೋಮಯವಾದ್ದು. ದ್ವೇಷ, ಅಸೂಯೆ, ಅತೃಪ್ತಿ, ಮುಂತಾದುವಕ್ಕೆ ಅವರು ಬದುಕಿನಲ್ಲಿ ಎಂದೂ ವಶವಾದವರಲ್ಲ. ಎಂ..ಎ ಪದವಿ ಗಳಿಸಿದ ಅವರು ಅಧ್ಯಾಪಕರಾಗ ಬಹುದಿತ್ತು. ಆದರೆ ತಮ್ಮ ಪಾಲಿಗೆ ಬಂದ, ಪ್ರಸಾರಂಗದಲ್ಲಿಯ ಉದ್ಯೋಗವನ್ನೇ ಅವರು ಸ್ವೀಕರಿಸಿದರು.

ಆ ಕ್ಷೇತ್ರದಲ್ಲಿ ಅವರು ಮಾಡಿದ ಕೆಲಸ ಕಡಿಮೆಯೇನಲ್ಲ. ಆ ಬಗ್ಗೆ ಅವರಿಗೆ ಅಪಾರ ತೃಪ್ತಿ. ಅನೇಕ ಒಳ್ಳೆಯ ಕೃತಿಗಳ ಪ್ರಕಟಣೆಗೆ, ಮೌಲಿಕ ಬರಹಗಳನ್ನು ಬರೆಯುವಂತೆ ಲೇಖಕರನ್ನು ಪ್ರೋತ್ಸಾಹಿಸಲು ಅವರು ಸದಾ ಯತ್ನಿಸಿದವರು. ಹೀಗಾಗಿ ಅಧ್ಯಾಪಕ ವೃತ್ತಿ ಆರಿಸಿಕೊಳ್ಳಲಿಲ್ಲವೆಂದು ಅವರಿಗೆ ಕಿಂಚಿತ್ತೂ ಪಶ್ಚಾತ್ತಾಪವಿಲ್ಲ.

ನಿಜವಾಗಿ ನೋಡುವುದಾದರೆ, ಕಣವಿಯವರ ಜೀವನ ಮತ್ತು ಸಾಹಿತ್ಯಗಳ ಸಾಂಗತ್ಯ ಅನುಪಮ. ಅವರ ಬದುಕೇ ಒಂದು ಕಾವ್ಯವೆನ್ನಬೇಕು. ಅದೊಂದು ಸಾರ್ಥಕ ಬದುಕು. ಆದ್ದರಿಂದ ಅವರ ಸಾಹಿತ್ಯ ಅದನ್ನೇ ಅಭಿವ್ಯಕ್ತಿಸಬೇಕು. ಚಿಕ್ಕಂದಿನಲ್ಲಿ ಅವರ ಮೇಲೆ ಬೀರಿದ ಪ್ರಭಾವಗಳು ಇದಕ್ಕೆ ಮುಖ್ಯ ಕಾರಣ.

ನಿಸರ್ಗದ ಸೊಬಗು, ಜಾನಪದದ ಸೊಗಡು, ಗ್ರಾಮೀಣ ಜೀವನದ ಸ್ವಾರಸ್ಯ – ಇವನ್ನೆಲ್ಲ ಹೀರಿಕೊಂಡ ಅವರ ಮನಸ್ಸು ಅದನ್ನೇ ಕಾವ್ಯದಲ್ಲಿ ಪ್ರಕ್ಷೇಪಿಸಿತೆನ್ನಬೇಕು. ಅವರ ಸೃಜನ ಪ್ರಕ್ರಿಯೆಯ ಹಿಂದೆ ಇವೆಲ್ಲ ಕೆಲಸ ಮಾಡುತ್ತವೆ ಎಂದರೆ ತಪ್ಪಲ್ಲ. ‘ ನನ್ನೂರನ್ನು ಆವರಿಸಿದ್ದ ಕಪ್ಪತಗುಡ್ಡದ ಸಾಲು, ಎಲೆವಳ್ಳಿ ತೋಟಗಳು, ಬಯಲು ಸೀಮೆಯ ಹಸುರು ಹೊಲಗಳು, ಎತ್ತರದ ಜೋಳದ ಬೆಳೆ, ಎರೆಹೊಲದಲ್ಲಿ ಹತ್ತಿ ಗೋಧಿ ಬೆಳೆಗಳು, ಸುಗ್ಗಿಯ ಹಬ್ಬ, ಹುಣ್ಣಿಮೆಯ ಹಿಗ್ಗು; ದಿನವಿಡೀ ಬಿಡುವಿಲ್ಲದ ದುಡಿಮೆ, ದುಡಿತದೊಂದಿಗೆ ಹಾಡುಪಾಡಿನ ಧ್ವನಿ, ಇವುಗಳೊಂದಿಗೆ ನನ್ನದೂ ಒಂದು ರೀತಿಯ ತನ್ಮಯತೆಯಿತ್ತು. ಹೀಗೆ ಹಳ್ಳಿಯ ಪರಿಸರ, ಸುತ್ತು ಪ್ರಕೃತಿಯ ಸುಖ ದುಃಖ ಸಂಭ್ರಮಗಳು ನನ್ನ ಮೇಲೆ ಬೀರಿದ ಪ್ರಭಾವ ಗಾಢವಾದದ್ದು. ಪರಿಣಾಮಕಾರಿಯಾದದ್ದು’ ಎಂದು ಅವರೇ ಹೇಳಿಕೊಂಡಿದ್ದಾರೆ.

ತಂದೆ ನಸುಕಿನೊಳೆದ್ದು ಅನುಭಾವಾಮೃತ ಓದೆ
ಸಕ್ಕರೆಯ ನಿದ್ದೆಯಲಿ ಸವಿಯುತಿದ್ದೆ.
ಮುಪ್ಪಿನ ಷಡಕ್ಷರಿಯ ಅನುಭಾವದಲೆಯೊಂದು
ಜಂಗಮನ ತಂಬೂರಿಯಲ್ಲಿ ಸಸಿನೆ,
ಧಾರವಾಡದ ತಾಯಿ ಮಡಿಲಲ್ಲಿ ಮೊರೆಯಿಟ್ಟು
ದತ್ತವಾಣಿಗೆ ಎದೆಯು ಕೂಡುತಿಹುದು.
ಮಧುರಚೆನ್ನರ ಮಧುರ ನುಡಿಯ ಮರ್ಮವನರಿತು
ಮಾರುಹೋಯಿತು ನನ್ನ ಭಾವಭಕ್ತಿ.

ತಮ್ಮ ಮೇಲೆ ಅನೇಕ ಕವಿಗಳ ಪ್ರಭಾವ ಉಂಟಾಗಿದ್ದರೂ ಅವರ ಕವನಗಳನ್ನು ಅನುಕರಿಸುವ ಚಟಕ್ಕೆ ಒಳಗಾಗದೆ ಅವನ್ನೆಲ್ಲ ಅರಗಿಸಿಕೊಂಡು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದನ್ನು ಅವರ ಕವಿತೆಗಳಲ್ಲಿ ಗಮನಿಸಬಹುದು. ಕಣವಿಯವರು ಕವಿತೆ ಬರೆಯ ತೊಡಗಿದಾಗ ನವೋದಯ ಮಾರ್ಗ ಉತ್ಕರ್ಷಾವಸ್ಥೆಯಲ್ಲಿತ್ತು. ಈ ಮಾರ್ಗದ ಶ್ರೇಷ್ಠ ಕವಿಗಳೆಲ್ಲ ಉತ್ತಮ ಕವನಗಳನ್ನು ಬರೆದಿದ್ದರು.

ಕಣವಿಯವರ ಆರಂಭದ ಕವಿತೆಗಳಲ್ಲಿ ಈ ಮಾರ್ಗದ ಲಕ್ಷಣಗಳನ್ನೇ ನಾವು ಕಾಣಬಹುದು. ಆದರ್ಶದ ಪ್ರೇಮ, ನಿಸರ್ಗ ಸೌಂದರ್ಯದ ಬಗ್ಗೆ ಆವೇಶ, ರಾಷ್ಟ್ರಭಕ್ತಿ, ಉದ್ಗಾರಗಳ ಒಲವು – ಇವೇ ಕಣವಿಯವರ ಆರಂಭದ ಕಾವ್ಯಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಬಹು ಬೇಗ ಅವರು ಈ ಮಜಲನ್ನು ದಾಟಿ ಮುಂದುವರಿದರು. ಭಾಷಾ ಪ್ರಯೋಗ, ದೃಷ್ಟಿ, ಧೋರಣೆ, ಮುಂತಾದವುಗಳಲ್ಲೂ ತಮ್ಮತನವನ್ನು ರೂಪಿಸಿಕೊಂಡರು.

ಆ ವೇಳೆಯಲ್ಲಿ ಪ್ರಗತಿಶೀಲ ಸಾಹಿತ್ಯವೂ ಪ್ರಬುದ್ಧಾವಸ್ಥೆಯಲ್ಲಿತ್ತು. ದಲಿತರ ಬಗ್ಗೆ ಅನುಕಂಪ, ಶೋಷಣೆಗೆ ವಿರುದ್ಧವಾಗಿ ಎತ್ತಿದ ಧ್ವನಿ, ಇವನ್ನೆಲ್ಲ ಕಾವ್ಯದಲ್ಲಿ ತರದಿದ್ದರೆ ಅಂಥ ಕವಿ ಪ್ರತಿಗಾಮಿ ಎಂದು ಭಾವಿಸುವ ಅಪಾಯವಿತ್ತು. ಹಾಗೆಂದು ಕಣವಿಯವರು ಅಂಥ ಮೋಹಕ್ಕೆ ಬಲಿಯಾಗದೆ ಮುನ್ನಡೆದರು. ಆದರೆ ಅವರ ಕವನಗಳಲ್ಲಿ ಉದ್ದಕ್ಕೂ ಮಾನವಾನುಕಂಪವನ್ನು ಗುರುತಿಸಬಹುದು.

ಮುಂದೆ ನವ್ಯಕಾವ್ಯ ಬಂತು. ಹಳೆಯ ಜಾಡನ್ನು ತೊರೆದು ಮುಕ್ತ ಛಂದಸ್ಸಿನಲ್ಲಿ, ಆಡುವ ಭಾಷೆಗೆ ಹತ್ತಿರವಾಗಿ, ಕಾವ್ಯ ರಚಿಸುವ, ವೈಯಕ್ತಿಕ

ನೆಲೆಯಿಂದ ಎಲ್ಲವನ್ನೂ ನೋಡುವ, ವ್ಯಂಗ್ಯ ವಿಡಂಬನೆಯ ವಿಧಾನ ಅನುಸರಿಸುವ ಹಠ ಅವರದಾಗಲಿಲ್ಲ. ಆದರೆ ನವ್ಯದ ಹಲವು ಲಕ್ಷಣಗಳನ್ನು ಅವರ ಕವಿತೆ ಒಳಗೊಳ್ಳದೆ ಇರಲಿಲ್ಲ. ಆದ್ದರಿಂದ ಅವರೊಬ್ಬ ಸಮನ್ವಯ ಕವಿ ಎಂದು ಹಲವು ವಿಮರ್ಶಕರು ಹೇಳುತ್ತ ಬಂದಿದ್ದಾರೆ.

ನವೋದಯ, ನವ್ಯ ಎಂಬವು ಎರಡು ವಿಭಿನ್ನ ಹಾಗೂ ಪರಸ್ಪರ ವಿರುದ್ಧ ಪ್ರಕಾರಗಳು ಎಂಬುದು ಈ ಭಾವನೆಯ ಹಿಂದಿರುವಂತಿದೆ. ಆದರೆ ನವೋದಯದಿಂದ ನವ್ಯಕ್ಕೆ ಕಾವ್ಯ ಸರಿದದ್ದು ಒಂದು ಬಗೆಯಲ್ಲಿ ವಿಕಾಸದ ಮುಂದಣ ಹಂತ ಎನ್ನಬೇಕು.

ನವ್ಯದ ಉರುಬು ಕಡಿಮೆಯಾದ ಮೇಲೆ ಬಂದ ಕವನಗಳಲ್ಲೂ ನವ್ಯದ ಹಲವಾರು ಲಕ್ಷಣಗಳು ಉಳಿದುಕೊಂಡಿರುವುದನ್ನು ಗಮನಿಸಬಹುದು. ಕಣವಿಯವರು ನವ್ಯ ಪ್ರಕಾರದಲ್ಲಿ ತಮಗೆ ಒಪ್ಪುವ ಅಂಶಗಳನ್ನು ಸ್ವೀಕರಿಸಿದರೆನ್ನಬೇಕು.

ಇದರಿಂದ ಇವರ ಕವನಗಳು ಇನ್ನೂ ಗಟ್ಟಿಯಾದುವು, ಹೆಚ್ಚು ಪರಿಣಾಮಕಾರಿ ಎನಿಸಿದವು. ಹಳೆಯ ಜಾಡನ್ನು ಬಿಟ್ಟು ಹೊಸ ಹಾದಿ ಹಿಡಿದುವು. ಭಾಷೆ ಹೆಚ್ಚಿನ ಜೀವಕಳೆಯಿಂದ ತುಂಬಿತು.

ಹೀಗಾಗಿ ಕಣವಿ ನವೋದಯ ನವ್ಯಗಳ ಸಮನ್ವಯದ ಮಾರ್ಗ ಹಿಡಿದರು ಎಂಬ ಭಾವನೆ ಸಾಮಾನ್ಯವಾಗಿದೆಯೆನ್ನಬಹುದು.

ಕಣವಿಯವರ ಕೃತಿಗಳಲ್ಲಿ ಹೆಚ್ಚು ಸುಂದರವಾಗಿರುವಂಥವು ಸಾನೆಟ್ಟುಗಳು. 'ಕಾವ್ಯ ರಚನೆಯ ಪ್ರಾರಂಭದಿಂದಲೂ ನನ್ನ ಮನಸ್ಸನ್ನಾಕರ್ಷಿಸಿದ ಕಾವ್ಯಪ್ರಕಾರ ಸಾನೆಟ್' ಎಂದು ಅವರೇ ಹೇಳಿಕೊಂಡಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ ಮತ್ತು ಪಂಪ ಪ್ರಶಸ್ತಿಗಳನ್ನು ಪಡೆದಿರುವ 'ಕಣವಿ' ಅವರು ಕನ್ನಡದ ಧನ್ಯ ಕವಿ.

ಚುಟುಕು ಸಾಹಿತ್ಯ ಪರಿಷತ್ತಿನ ಸ್ಥಾಪಕರಾದ ಡಾ. ಎಂ.ಜಿ.ಆರ್ ಅರಸ್ ಅವರ ಕೋರಿಕೆಯ ಮೇರೆಗೆ ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿಯ ಗೌರವ ಸದಸ್ಯರಾಗಿ ಪರಿಷತ್ತಿನ ಘನತೆ ಗೌರವದ ಹೆಚ್ಚಳಕ್ಕೆ ನಾಡೋಜ ಡಾ. ಕಣವಿ ಅವರು ಕಾರಣರಾಗಿದ್ದಾರೆ.


ಎಚ್ಚೆಸ್ಕೆ

ವೈದ್ಯವಾರ್ತಾ ಪ್ರಕಾಶನದ ಹೆಮ್ಮೆಯ ಕೃತಿಗಳು

(1)	ಆಯುರ್ವೇದದಲ್ಲಿ ಸಂಶೋಧನೆ ಅಗತ್ಯವೇ?	ಡಾ. ಎಂ.ಜಿ.ಆರ್. ಅರಸ್
(2)	ಶಿವಾಂಬು ಪಾನೀಯ	ಡಾ. ಎಸ್.ಎಫ್ ಹಿರೇಮಠ್
(3)	ಪಂಡಿತ್ ತಾರಾನಾಥ	ಡಾ. ಎಂ.ಜಿ.ಆರ್. ಅರಸ್
(4)	ಪಾರ್ಥನಾರಾಯಣ ಪಂಡಿತ್	ಡಾ. ಎಂ.ಜಿ.ಆರ್. ಅರಸ್
(5)	ಕ್ಷೇಮ	ಡಾ. ರಾಜೇಂದ್ರ
(6)	ಪ್ರೇಮ ಸಿಂಚನ	ಕೀರ್ತಿಕುಮಾರ್
(7)	ನಿವೇದನೆ	ಗೀತಾ ಮಹದೇವ ಪ್ರಸಾದ್
(8)	ಒಡಲಬೇಗೆ	ಬಿ.ಟಿ. ಲಲಿತಾನಾಯಕ್
(9)	ಸಗ್ಗದ ಬೇರಿಗೆ	ಪ್ರೊ. ಸುಜನ
(10)	ಅಕಬರ ಅಲಿ ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(11)	ಚದುರಂಗ ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(12)	ಸಿ.ಪಿ.ಕೆ. ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(13)	ಎಚ್ಚೆಸ್ಕೆ ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(14)	ವೈಶಾಖದ ವೈವಿಧ್ಯ	ಡಾ. ಎಂ.ಜಿ.ಆರ್. ಅರಸ್
(15)	ಚದುರಂಗ 80	ಡಾ. ಎಂ.ಜಿ.ಆರ್. ಅರಸ್
(16)	ಮಾದಕ ಲೋಕ	ಡಾ. ರಾಜೇಶ್ವರ್
(17)	ನಿರ್ಗಮನ	ಸರೋಜ ಕೃಷ್ಣಮೂರ್ತಿ
(18)	ರಾಯರವತಾರ	ಡಾ. ಸಿ.ಕೆ.ಎನ್. ರಾಜ
(19)	ಜಾಲಾರಿ	ಡಾ. ಎಲ್. ಬಸವರಾಜು
(20)	ಸೇವು	ವಿಶ್ವನಾಥ್
(21)	ಕೆಂಡಸಂಪಿಗೆ	ಉಮಾದೇವಿ ಅಂಗಡಿ
(22)	ಸಂಧ್ಯಾ ಕವಿತೆಗಳು	ಸಂಧ್ಯಾ
(23)	ಕಚಗುಳಿ	ವಿಜಯ ಹೆಮ್ಮಿಗೆ
(24)	ಮೌನಧ್ವನಿ	ದ್ವಾರಕಾನಾಥ್
(25)	ದೇಜಗೌ ಚುಟುಕುಗಳು	ಡಾ. ದೇಜಗೌ
(26)	ದೇಜಗೌ ಸೂಕ್ತಿಗಳು	ಡಾ. ದೇಜಗೌ

(27)	ಚುಟುಕು ಮಹಾಕವಿ ಸರ್ವಜ್ಞ	ಡಾ. ದೇಜಗೌ
(28)	ನಿತ್ಯ ಸಾಹಿತ್ಯೋತ್ಸವ	ಡಾ. ದೇಜಗೌ
(29)	ಎಚ್ಚೆಸ್ಕೆ ಆಯ್ದ ಬರಹಗಳು	ಡಾ. ಎಂ.ಜಿ.ಆರ್. ಅರಸ್
(30)	ಎಚ್ಚೆಸ್ಕೆ ಬರಹಗಳಲ್ಲಿ ಕುವೆಂಪು	ಡಾ. ಎಂ.ಜಿ.ಆರ್. ಅರಸ್
(31)	ದೇವ ಜೀವ ಜಗತ್ತು	ಪ್ರೊ. ಎಚ್ಚೆಸ್ಕೆ
(32)	ಅಕಬರ ಅಲಿ ಆಯ್ದ ಬರಹಗಳು	ಡಾ. ಎಂ.ಜಿ.ಆರ್. ಅರಸ್
(33)	ಅಕಬರ ಅಲಿ ಆಯ್ದ ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(34)	ಚುಟುಕು ವೈಶಾಖ	ಡಾ. ಎಂ.ಜಿ.ಆರ್. ಅರಸ್
(35)	ಚುಟುಕು ಮಲ್ಲಿಗೆ	ಡಾ. ಎಂ.ಜಿ.ಆರ್. ಅರಸ್
(36)	ಚುಟುಕು ಚೈತ್ರ	ಡಾ. ಎಂ.ಜಿ.ಆರ್. ಅರಸ್
(37)	ಚುಟುಕು ಬೆಳಕು	ಡಾ. ಎಂ.ಜಿ.ಆರ್. ಅರಸ್
(38)	ಚುಟುಕು ಸಾಹಿತ್ಯ ವಿಮರ್ಶೆ	ಡಾ. ಎಂ.ಜಿ.ಆರ್. ಅರಸ್
(39)	ಪುರುಷರಲ್ಲಿ ಬಂಜೆತನ	ಡಾ. ಸಿ.ಎಸ್.ಕೆ.
(40)	ಸಿ.ಎಸ್.ಕೆ. ಭಾಷಣಗಳು	ಡಾ. ಸಿ.ಎಸ್.ಕೆ.
(41)	ಚುಟುಕು ಸಿರಿ	ಹೆಚ್.ಎಂ. ರಾಜಪ್ಪಗೌಡ
(42)	ಚುಟುಕು ವರ್ಷಿಣಿ	ತೇಜಸ್ವಿನಿ ದೇವಿ ಅರಸ್
(43)	ಅರ್ಬುದ 101 ಪ್ರಶ್ನೆಗಳು	ಡಾ. ಎಂ.ಜಿ.ಆರ್. ಅರಸ್
(44)	ಚುಟುಕು ವಿಕಾಸಸೂಚಿ	ಡಾ. ಎಂ.ಜಿ.ಆರ್. ಅರಸ್
(45)	ಚುಟುಕು ಮಂದಾರ	ಎ. ರಾಮದಾಸ್, ಎಂ.ಎಲ್.ಎ.
(46)	ಅರ್ಶಸ್ ೧೦೧	ಡಾ. ಎಂ.ಜಿ.ಆರ್. ಅರಸ್
(47)	ಚುಟುಕು ನೆಲೆ ಬೆಲೆ	ಎ.ಎಸ್. ಗುರುಸ್ವಾಮಿ, ಎಂ.ಎಲ್.ಎ.
(48)	ಚುಟುಕು ಶ್ರಾವಣ	ಎ.ಎಸ್. ಗುರುಸ್ವಾಮಿ, ಎಂ.ಎಲ್.ಎ
(49)	ಎಚ್ಚೆಸ್ಕೆ ಲಹರಿ	ಡಾ. ಎಂ.ಜಿ.ಆರ್. ಅರಸ್
(50)	ಸಹಜ ರಾಜಯೋಗ	ಡಾ. ಎಸ್.ಎಫ್. ಹಿರೇಮಠ್
(51)	ವಿ.ಗ.ನಾ. ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(52)	ಮಲ್ಲಿಗೆಯ ಮೊಗ್ಗು	ಡಾ. ಎಂ.ಜಿ.ಆರ್. ಅರಸ್
(53)	ಬೆಳಕಿನ ಆರಾಧನೆ	ಡಾ. ಎಂ. ಅಕಬರ ಅಲಿ
(54)	ಸ್ತ್ರೀಯರಲ್ಲಿ ಬಂಜೆತನ	ಡಾ. ಸಿ. ಶರತ್‌ಕುಮಾರ್

(55)	ಭೂಮಿ ಕುಪಿಸಲಿಲ್ಲ	ಶ್ರೀಕಾಂತ
(56)	ಅಕಬರ ಅಲಿ ಸಮಗ್ರ ಕಾವ್ಯ	ಡಾ. ಎಂ. ಅಕಬರ ಅಲಿ
(57)	ಚಾಯಿಬಾಬಾ	ಡಾ. ಎಲ್. ಬಸವರಾಜು
(58)	ಎಚ್ಚೆಸ್ಕೆ ಚುಟುಕು ದರ್ಶನ	ಡಾ. ಎಂ.ಜಿ.ಆರ್. ಅರಸ್
(59)	ಡಾಕ್ಟರ್ ಬಾಷ ಚುಟುಕುಗಳು	ಡಾ. ರಿಯಾಜ್ ಬಾಷ
(60)	ಬಿ.ಟಿ. ಲಲಿತಾನಾಯಕ್ ಆಯ್ದ ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(61)	ಕೀಚಕರು	ಡಾ. ಎಂ. ಜಿ. ಆರ್. ಅರಸ್
(62)	ಕಾಯಬೇಕು ನಾಳೆಯವರೆಗೂ	ಡಾ. ರಿಯಾಜ್ ಬಾಷ
(63)	ಕುಲಪತಿ ಚುಟುಕುಗಳು	ಡಾ. ಎಂ. ಜಿ. ಆರ್. ಅರಸ್
(64)	ಚರ್ಮರೋಗಗಳು	ಡಾ. ಹೆಚ್. ಹನುಮಂತಪ್ಪ
(65)	ಚೆಂಡು ಹೂಗೊಂಡೆ	ಪ್ರೊ. ಎಚ್ಚೆಸ್ಕೆ
(66)	ಹರಳಯ್ಯ ವಿಜಯ/ಕ್ರಾಂತಿ ಕಹಳೆ	ಡಾ. ದೇಜಗೌ
(67)	ದೇಜಗೌ ಕಾವ್ಯ ಸಂಕಲನ	ಡಾ. ದೇಜಗೌ
(68)	ಎಚ್ಚೆಸ್ಕೆ ಸಮಗ್ರ ಪ್ರಬಂಧಗಳು	ಪ್ರೊ. ಎಚ್ಚೆಸ್ಕೆ
(69)	ಅತ್ರಿಸೂನು ಚುಟುಕುಗಳು	ಡಾ. ಜಿ.ಟಿ.ನಾರಾಯಣ ರಾವ್
(70)	ಕೇಳು ಮಗಳೆ	ಡಾ.ಎಂ.ಜಿ.ಆರ್. ಅರಸ್
(71)	ಜರಗನಹಳ್ಳಿ ಚುಟುಕುಗಳು	ಡಾ. ಎಂ.ಜಿ.ಆರ್. ಅರಸ್
(72)	ಸರ್ವಜ್ಞ ಮಹಾಕವಿ	ಡಾ.ಎಂ. ಅಕಬರ ಅಲಿ
(73)	ಬಂಗಾರಪ್ಪ 22	ಡಾ. ದೇಜಗೌ
(74)	ಡಾ.ಕಣವಿ ಚುಟುಕುಗಳು	ಡಾ.ಎಂ.ಜಿ.ಆರ್. ಅರಸ್
(75)	ಸೆಳಕು–ಮೆಲುಕು	ಡಾ.ದೇಜಗೌ
(76)	ಆರೋಗ್ಯವೇ ಭಾಗ್ಯ	ಡಾ.ಟಿ.ಎಂ.ಶಿವಾನಂದಯ್ಯ
(77)	ದೀನಬಂಧು ಶ್ರೀ ರಾಮಾನುಜ	ಡಾ. ಎಚ್ಚೆಸ್ಕೆ
(78)	ದೇಜಗೌ ಚುಟುಕು ಮುನ್ನುಡಿ	ಡಾ.ಎಂ.ಜಿ.ಆರ್. ಅರಸ್
(79)	ಚುಟುಕು ಕಾವೇರಿ	ರತ್ನಹಾಲಪ್ಪ ಗೌಡ
(80)	ಡಾ.ಪಂಚಾಕ್ಷರಿ ಆಯ್ದ ಚುಟುಕುಗಳು	ಡಾ.ಎಂ.ಜಿ.ಆರ್. ಅರಸ್
(81)	ಕೀಚಕರು ನಾಟಕ	ಶ್ರೀಕಾಂತ್
(82)	ಚುಟುಕು ಕಾವೇರಿ	ಚುಟುಕುಸಿರಿ ರತ್ನಾಹಾಲಪ್ಪ ಗೌಡ



ಡಾ. ದೇಜಗೌ



ರತ್ನ ಹಾಲಪ್ಪಗೌಡ



ಡಾ. ಎಂ.ಜಿ.ಆರ್. ಅರಸ್

ಕನ್ನಡ ಸಾಹಿತ್ಯೋದ್ಯಾನದ ರಂಗುರಂಗಿನ ಸುಗಂಧಯುಕ್ತ ಪುಷ್ಪ
ಚೆನ್ನವೀರಕಣವಿ ಹೆಸರಿನ ಪುಷ್ಪವೂ ಒಂದು. ಆ ಪುಷ್ಪದ ಕಂಪನ್ನರಿ
ಕನ್ನಡಿಗನಿಲ್ಲ. ಓದುಕಲಿತ ಪ್ರತಿಯೊಬ್ಬ ಕನ್ನಡಿಗನ ತುದಿನಾಲಿಗೆಯಲ್ಲಿ ಆ
ರಂಜಿಸುತ್ತದೆ. ವಿರಾಟ್ ಚೈತನ್ಯದ ಅವಿಭಾಜ್ಯಾಂಶವಾದ ಕಣವಿ ಚೇತನ
ಉದ್ಭವಿಸುವ ಕಾವ್ಯ ಕಿರಣಗಳಲ್ಲಿ ಮೀಯುವ ಕನ್ನಡಿಗರ ಹೃ
ಆನಂದಮಯವಾಗಿರುತ್ತದೆ.

ಸತ್ಯದ ತಂತ್ರ ಮಂತ್ರಗಳ ಬಗ್ಗೆ ಸಹಾನುಭೂತಿಯಿದ್ದರೂ ನವೋದಯದ
ಬೇರುಬಿಟ್ಟು, ಸುಂದರ ಪ್ರಸೂನಗಳನ್ನು ಅರಳಿಸಿದ ನೆಲದ ಸಹಜಸ್ವೋಪಜ್ಞ
ಅವರದು. ನವೋದಯದ ಜೀವನಾದರ್ಶ ನವ್ಯದ ವಾಸ್ತವತೆಯೆರಡ
ಕಾವ್ಯದಲ್ಲಿ ಅಡಕವಾಗಿ ಕನ್ನಡದ ಜಾಯಮಾನಕ್ಕನುಗುಣವಾಗಿ ಸಂಗಪಿ
ಭಾಷೆಯ ಭಾವ ಸೌಂದರ್ಯವನ್ನೂ ಬೌದ್ಧಿಕ ಸಾಮರ್ಥ್ಯವನ್ನೂ ಬೆಸೆದುಕೆ
ಮೋಹಕ ಶೈಲಿಯನ್ನು ನಿರ್ಮಿಸಿ, ಕನ್ನಡಭಾಷೆಗೆ ಕಸುವನ್ನು ಕೆಚ್ಚನ್ನೂ ಕೂಪ
ಒದಗಿಸಿದ ಹೆಮ್ಮೆಯ ಕಣವಿಯವರು.

ಬಸವ ಹರಿಹರಾದಿ ಶರಣರ ಸಂತಾನದಂತೆ ವಾರಸುದಾರರಂತೆ ಕನ್ನಡ ಸಾ
ಸಂಸ್ಕೃತಿಯನ್ನು ಬೆಳೆಸಿದ ಕೀರ್ತಿ ಕಣವಿಯವರಿಗೆ ಸಲ್ಲುತ್ತದೆ. ಆಕಾಶ
ಮಧುಚಂದ್ರ, ಕಾವ್ಯಾಕ್ಷಿ, ನೆಲಮುಗಿಲು, ಮಣ್ಣಿನ ಮೆರವಣಿಗೆ, ದೀಪ
ಮೊದಲಾದ ಹಲವು ಕಾವ್ಯ ಸಂಗ್ರಹಗಳ ಹಾಗೂ ಬರವಣಿಗೆಗಳ ಮೂಲಕ
ಸಾಹಿತ್ಯಕ್ಷೇತ್ರವನ್ನು ಶ್ರೀಮಂತಗೊಳಿಸಿಯೂ, 'ಶ್ರೀಮಂತಿಕೆ'ಯ ಅಟ್ಟಹಾಸವಿಲ್ಲದ
ಉಲ್ಲಾಸಭರಿತವಾದ ನಗುಮೊಗದ, ಸರ್ವಾದರಣೀಯರಾದ ಸುಮನಸರವರು.

ಕನ್ನಡ ನಾಡಿನ ಇಂಥ ಅಚ್ಚು ಮೆಚ್ಚಿನ ಸಮುನ್ನತ ಕವಿಯಾದ ನಾಡೋ
ಚೆನ್ನವೀರಕಣವಿಯವರ ಈ ಚುಟುಕುಗಳು ಆ ಕ್ಷೇತ್ರದ ಘನತೆ ಗೌರವ
ಹೆಚ್ಚಿಸುವ ನಿಟ್ಟಿನಲ್ಲಿವೆ. ಜೀವನವೆಂಬುದು ಒಂದು ಆದ್ಯಂತರಹಿತ ಆಯಾಮವ
ವಿಶ್ವರೂಪಿ, ಅನಂತಮುಖಿ; ವೈವಿಧ್ಯಮಯಿ; ನಿರ್ದಿಗಂತವಾದದ್ದು. ಅದೆ
ಮೇರೆಯಿಲ್ಲದ ಮಹಾಸಾಗರ. ಲಕ್ಷಾಂತರ ವರ್ಷಗಳಿಂದ ಮಾನವ ಸಮು
ತಮತಮಗೆ ಶಕ್ಯವಿದ್ದಷ್ಟು ವಿಚಾರಾನುಭವಗಳ ಮುತ್ತು ರತ್ನಗ
ಸೂರೆಗೊಳ್ಳುತ್ತಾರೆ, ಎಷ್ಟು ಸೂರೆಗೊಂಡರೂ ಅವು ಅಕ್ಷಯವಾಗುತ್ತವೆ.

ಕನ್ನಡ ಸಾಹಿತ್ಯ ಚರಿತ್ರೆಗೆ ಒಂದೂವರೆ ಸಾವಿರ ವರ್ಷದ ಇತಿಹಾಸವಿ
ಅರ್ಜುನನಂತೆ ಅಜ್ಞಾತವಾಸದಲ್ಲಿದ್ದ ಚುಟುಕು ಕಾವ್ಯವನ್ನು ಸಿಂಹಾಸನಾರೋ
ಮಾಡಿಸಿದವರು ಡಾ॥ ಎಂ.ಜಿ.ಆರ್ ಅರಸ್ ಅವರು. ಅದು ಅವರ ಬರಿ
ಒಂದೂವರೆ ಸಾವಿರ ವರ್ಷದಿಂದ ತಪೋಮಗ್ನವಾಗಿದ್ದಂತೆ ತೋ
ಚಲವಂತರಾದ ಡಾ॥ ಅರಸು ಅವರ ಎಲ್ಲ ಯೋಜನೆಗಳೂ ಪರಿಪೂರ್ಣಗೊ
ಕನ್ನಡದ ಸ್ಥಾನ ಪರಾಕಾಷ್ಠೆಯನ್ನು ತಲುಪಲೆಂದು ನಾನು ತಾಯಿ ಭುವನೇಶ್ವರಿ
ಪ್ರಾರ್ಥಿಸುತ್ತೇನೆ.

ಡಾ॥ ದೇಜಗೌ

ಮುನ್ನುಡಿಯಿಂದ